Yakṣagāna

1870

ಶ್ರೀ

Jakṣagāna

ಯಕ್ಷಗಾನ

ಪಂಚವಟೀ ರಾಮಾಯಣದೊಳಗಣ

ವಾಲಿ ಸುಗ್ರೀವರ ಕಾಳಗ.

Edited by

H. NARASIMMIAH,

First Edition 2,000 Copies.

BANGALORE:

Printed and Published

BY H. NARASIMMIAH,

at the Vichara Durpana Press.

1870.

(Price 3 Annas.) (ಕ್ರಯ ೩ ಆಣೆ.)

ಶ್ರೀ.

ಪಂಚವಟೀರಾಮಾಯಣ.

ಅರಣ್ಯಕಾಂಡ.

ಯಕ್ಷಗಾನ.

ಮುನಿಪಕೇಳ್ಬೈಮುಂದೆ ರಾಮಲಕ್ಷ್ಮಣರುಗಳು । ವನಪಂಚವಟಿಯೊಳಂದೇನಮಾಡಿದರುಶೂ । ರ್ಪನಖಿಮತ್ತೇನಾದಳೆಂಬ ವಿವರ । ವನಂಮುಮುನತ್ರಿಳಿವಡುಸುರೆಂನುತಾ ॥ ತನಯರೀರ್ವರುಕರವಮು ।ದುಃಸಗೊಳಲು । ಮುನಿವಿನಯದಿಂಬಾಲಕರತೆಗದಪ್ಪಮಂನಿಸುತ । ಗುಣದಿಂದಪೇಳಿದನುಮುಂದಣಪ್ರಸಂಗಗಳ। ವನಜನಾಭನಚರಿತವಾ ॥೧॥

ರಾಗ ಸಾವೇರಿ ಅಟತಾಳ.

ತನಯರುಕೇಳ್ದೃಡದೊಳಗಂದುಶೂ । ರ್ಪನಖಿಯುತಂನಂತರಂಗದಿನೊಂದು।ಯಿನಿತಾದವೃತ್ತಾಂತಗ।ಳನುರಾವಣಗೆಪೋಗಿಪೇಳುವೆನೆಂದು ॥ ೧ ॥ ರಾಘವಮಾಡಿದಪೂಟಕ್ಕೆ ತಂಮಲಕ್ಷ್ಮಣನೋಡಿದನೋಟಕ್ಕೆ । ಮೂಗುಮೊಲೆಯಕೊಯ್ದಕೋಪಕ್ಕೆ ತಾನುಸಾಗಿಬಂದಳುಲಂಕದ್ವೀಪಕ್ಕೆ ॥೨॥ಹೀಗೆಂದುತನಗೆತಾನೆಂದಳುತೆಂಕ।ಸಾಗರದೆಡೆಯಲ್ಲಿನಿಂದಳು ।ಪ್ಯಾಗೆನಾಟುತಪಾಪಿಬಂದಳುತ್ತಾ । ನಾಗಿಲಂಕೆಗೆಕೇಡತಂ

ದಳು ॥ ೩ ॥ ಮಂಡೆಮಂಡೆಯಹೊಡಕೊಳ್ಳುತ್ತತುಂ
ಬಿ। ಕೊಂಡುಕಂಣಲಿನೀರಸುರಿಸುತ್ತ । ಕೆಂಡದಂತೆರಾ
ದ್ರತಾಳುತ್ತ ಅಲ್ಲಿ । ಕಂಡಸುರಗೆಸುದ್ದಿಹೇಳುತ್ತ ॥ ೪ ॥
ದಶಕಂಠನನುಜೆಯಕಂಡನುಕಾಣು ।ತ್ರಸುರಚಿತ್ತದಿ
ಬ್ರಮೆಗೊಂಡನುಅಂದಿ। ನೆಸವಪಾಲಗವಬೀಳ್ಕೊಂ
ಡನುಅತಿ । ಕುಶಲದಿಂದೊಳಗೆದ್ದುಬಂದನು ॥೫॥
ತಂಗಿಯಕರದುಮಾತಾಡಿದಮಾನ। ಭಂಗದಪರಿಯಲ್ಲ
ನೋಡಿದ। ಹಿಂಗದೆರಾಪ್ರವತಾಳಿದಅಂತ। ರಂಗವಿ
ದೇನೆಂದುಕೇಳಿದ ॥ ೬ ॥

ದ್ವಿಪದೆ ॥ ಏನುಹೊಡೆಯಿತುಮಾರಿತಂಗಿನಿನಗೆನು
ತ । ದಾನವರರಸಬೆಸಗೊಂಡನಸುನಗುತ। ಮಾನವ
ನುತಂದೆಖಳವಂಶಕ್ಕನೀನು। ಮಾನಭಂಗವನೆಸಗಿದ
ವನಪೆಸರೇನೊ

ರಾಗ ಕಾಂಬೋದಿ ಝಂಪೆತಾಳ.

ದಶರಥನಸುತರಾದ ರಾಮಲಕ್ಷ್ಮಣರೆಂಬ। ಪೆಸರು
ಳ್ಳವೀರರಿಬ್ಬರಿಗೆ। ವಸುದೆಯೊಳಗಿದಿರಿಲ್ಲನೋಡಿದರೆ
ಬಾಲಕರು । ಅಸಮಸಾಹಸರುಕೇಳಂಣ ॥೧॥ ರಾಮ
ನೆಂಬಾತನಿಗೆರಾಜಿಸುವಳೋರ್ವಸತಿ । ಕಾಮನರಗಿ
ಣಿಯಂತೆತರುಣಿ । ಕಾಮಿನಿಯಕಂಡುಮರುಳಾಗದವ
ರ್ಯಾರುಂಟು। ಭೂಮಿಯೊಳುಜೋಡಿಲ್ಲಅವಳ್ಗೆ॥೨॥
ನಾಗವೇಣಿಯಕಂಡು ಸೈರಿಸದೆಮಸಸುನಿನ । ಗಾಗಿ

ಕೈಯಿಕ್ಕಿದೆನುಸತಿಗೆ।ಆಗಲಕ್ಷ್ಮಣನೆಂಬಹುಡುಗಯಿಂ
ತೆರಡು ಮೊಲೆ ಮೂಗಸಹಕೊಯ್ದರಣಶೂರ ॥ ೩ ॥
ಖರದೂಷಣಾದಿಗಳಸಂಹ್ವರಿಸಿ ಪಂಚವಟ । ವರದಂಡ
ಕಾರಣ್ಯದೆಡೆಯಸ್ಥಿರವಾಗಿನೆಲಸಿರುವನಂಮ । ವರ
ನೆಲ್ಲಯಮಪುರಕೆಕಳುಹಿಸಿದನಾರಾಮ ॥ ೪ ॥ದಾನವರ
ಸಂಹ್ವರಿಸಿ ನಂಮವರಹೊಳಲೆಲ್ಲದಾನಗಳಕೊಟ್ಟಋ
ಷಿಗಳಿಗೆಯೇನುಹೋದರು ಹೋಗಲಂತಾದಡಾಗ
ಲಾ । ಮಾನುನಿಯತರಬೇಕುಸಿದ್ಧ ॥ ೫ ॥

ರಾಗ ತೋಡಿ ಅಟತಾಳ.

ಅಂತಚೆಲುವೆಯೇನೆ ಜಾನಕೀದೇವಿ । ಅಂತಚೆಲು
ವೆಯೇನೆ ॥ ಅಂತಚೆಲುವೆಯೇನೆಕಾಂತೆಜಾನಕಿದೇವಿ
ಕಾಂತೆಯರೊಳುಮಾಂಡೋದರಿಗಿಂತಸೊಬಗೇನೆ
ಪ ॥ ತರಬೇಕುತರುಣಿಯಳಕಾಮನಮುಂಗೈ । ಯ
ರಗಿಣಿಯಂತಿಹಳಸ್ಮರನಸಿಂಗಾಡಿಪೂರ್ಬಿನನೀರೆಮಲ್ಲಿ
ಗೆ । ಪರಿಮಳಿಸುವಮೈಯುವರಕರಿಗಮನೆಯ ॥ ೧ ॥
ಪಂನಂಗನಿಭವೇಣಿಯಪಂಕಜಯಸಳ್ಗಂನಕಂನಡಜಾ
ಣೆಯ । ಹೊಂನಪುತ್ಥಳಿಬೊಂಬೆಯಂತೆ ರಾಮನಕೈ
ಯ್ಯಕಂನಡಿಕದಬಿನ ಕಡುಸುಪ್ರವೀಣೆಯ ॥ ೨ ॥ ಕಿ
ರುನಗೆಮೊಗದ್ವಜೆಯಲಾವಣ್ಯ ಭಾ । ಸ್ಕರಕೋಟ
ನಿಭತೇಜೆಯ । ವರಕುಂಭಕುಚದೊಳಿರ್ಪ ಲಲಿತಕ್ಕೆ
ಸರಿಮದ್ಯಶುಭವಚನೆ ಶುಭಕಂನೆಯ ॥ ೪ ॥

ಕಂದ || ತಂಗಿಯಸವಿನುಡಿಯುಂಕೇ | ಳ್ದಂಗಜಾಸ್ತ್ರ ಪತಾಗಿರಾವಣಭ್ರಮೆಗೊಂಡಂ | ಅಂಗನೆಮೊಂಡೋದ ರಿಗಿದಸಾಂಗದಿ | ಪೇಳೆಪೋಗಿಸತಿಗುಸುರಿದನೊ ||

ರಾಗ ದೇಸಿ ಜಂಪೆ ತಾಳ.

ಜನಕನಂದನೆಯುಂತೆಸೀತೆಯಂಬವಳಂತೆ | ಘನ ಸೊಬಗಿನವಳಂತೆರಾಘವನಕಾಂತೇ ||೧|| ತರಲುಪೋ ಪೆನುಸಾನುತಂದರವಳುನೀನು | ಯರಕವಾಗಿರುವಬಗೆ ಪೇಳಬೇಕೆನಗೆ || ೨ ||

ರಾಗ ಭೈರವಿ ಅಟತಾಳ.

ಥರವಲ್ಲಕಾಂತಥರವಲ್ಲ | ಥರವಲ್ಲ ಯಿದುಲೋಕ ಮಾತೆಜಾನಕಿಯ | ತರುವೆನೆಂದೆನುತಪೋಗುವದು ಆ ಸತಿಯ || ನಾರಾಯಣಸ್ವಾಮಿಆರಾಮಚಂದ್ರ | ಚಾರು ಲಕ್ಷ್ಮಣನೆಂಬಾತ ಯುರಗೇಂದ್ರ | ನಾರಿಜಾನಕಿಯಂ ಬಳಾಕೆಲಕ್ಷ್ಮಿದೇವಿ | ಧಾರುಣಿಯೊಳಗವತರಿಸಿದಸರ್ಾ ರಿ ||೨|| ಕುಲವೆಸಂಹಾರವಾಗುವಕಾಲಬಂತು | ಯಿ ಳೆಯೊಳ್ಬಾಳಿರುವಂತರುಣವೆಲ್ಲಸಂತು | ಯಿಳೆಯನಂ ದನೆಸಿಕ್ಕಳೇಕೆಯಿಭ್ರಾಂತು | ಪುಳಿಯಾದುಪ್ರಾ ಣಸಾರಿದೆನಾನೆಂತು || ೩ || ಖರದೂಷಣರುಬಡವರೆ ನೀನೋಡು | ನೆರೆಮುಂದೆಬರುವದನರಿತುಮಾತಾ ಡು | ಕರವಮುಗಿದುಬೇಡುವೆದಯಮಾಡುಆ | ತರು ಣಿಯತಳ್ಳಿಹೋದರೆಬಂತುಕೇಡು ||೪||

ರಾಗ ಶಂಕರಾಭರಣ ಆದಿತಾಳ.

ವಲ್ಲಭೆನೀನಿಂತಮಾತಯಂನೊಳುಪೇಳುವರೇ
ನೆ। ಹುಲ್ಲೆಘೋರಸಿಂಹ್ವವಂನುಕೊಲ್ಲುವರುಂಟೆ ॥೧॥
ಯಳ್ಳಿನಷ್ಟುಕಿಚ್ಚುಮನೆಗಳೆಲ್ಲಸುಡದೆನಿಲುವದುಂಟೆ।
ವಳ್ಳಿತಲ್ಲಬುದ್ಧಿಸುಂಮನೆಕೆಡಬೇಡಕಾಂತಾ ॥೨॥ ಮಾ
ನಿನಿಕೇಳಿಲಿಗಳುಮದ್ದಾನೆಯಸಂಹ್ವರಿಸಲುಂಟೇ। ದಾ
ನವರಿಗುಮನುಜರಿಗುಸಮನೇನೆಕಾಂತೆ ॥೩॥ ಕಾಣದೆ
ಕುಣಿಯೊಳುಬಿದ್ದಾನೆಯಾದರೇನುಕಡೆಗೆ।ಶ್ವಾನನಿಂ
ದಕಡೆಯಲ್ಲವೆನೀನೋಡುಕಾಂತಾ॥೪॥ಕಿಟ್ಟಿಗಿರುವೆ
ಮುತ್ತಲುಂಟೆ। ಬಟ್ಟಲುಮಾಳಿಗೆಯುಸರಿಯೆ।ಹೆಚ್ಚುಕ
ಡಮೆ ಯಿಲ್ಲವೇನೆಅಮೃತಗರಳವೆ॥೫॥ ಮೆಟ್ಟಿಪರರಪೆಂ
ಣಗೆಮನಸುಯಿಕ್ಕಿದಾತಗಮೃತವಿಷವು। ಕಿಚ್ಚುನೀ
ರೊಳುರಿವದುಂಟೆ। ಹೆಚ್ಚಿನಕಾಂತಾ ॥೬॥ ಯಿರಾರೇ
ಳುಲೋಕದೊಳುಳ್ಳಪಾರುಪತ್ಯಯನಗಿದ್ದಂತೆ। ನಾರಿ
ಹುಲ್ಲೆಮನುಜರ್ಗೆಲ್ಲನಾನಂಜೂವನೇ ॥೭॥ ಬೇರಕಡಿ
ದಮೇಲೆವೃಕ್ಷಜಾರದೆನಿಲ್ಲುವದುಂಟೆ। ಮಾರಿಬಡಿವ
ವೇಳ್ಯಕ್ಯಾಗುಬಾರಾರುಕಾಂತ ॥೮॥ ಬಂದದ್ದೆಲ್ಲಬರ
ಲಿದರಿಂದ। ಮಂದಗಮನೆಸೀತೆಯಂನು। ತಂದಲ್ಲದೆ
ಬಿಡೆನುಕಾಣೆಚಂದಿರವದನೆ ॥ ೯ ॥ ತಂದೆತಾಯಿಗಳಾ
ಣೆನಿಮಗೆ। ತಂದರೆಜಾನಕಿಯಮನೆಗೆ। ಕುಂದುಮದೈ
ಶ್ವರ್ಯವೆಲ್ಲ। ಯಿಂದೆಂನರಮಣ ॥೧೦॥

ಕಂದ ॥ ಕೋವಿದನೀತ್ರಿಯಮಾತನು ಭಾವಕಿ
ಯುಕೆಳ್ದ್ಳನಲ್ಲನೊಡಂಬಡಿಸಿದೊಡಂ । ರಾವಣಕೇಳ
ದೆತಂನಯಮಾವಮಾರೀಚನಬಳಿಗೈದುಮತ್ತ್ರಿಂ ತೆಂ
ದಂ ॥೧॥

ರಾಗ ಕೇತಾರಗೌಳ ಅದಿತಾಳ.

ಮಾರೀಚಾನಿಶಾಚರಸಂತತವೀರಮನೋಸ್ಸರವಿ
ಕ್ರಮಶೌರ್ಯ । ಮಾರಾಂಗಶರೀರಮನೋಹರಕಾರು
ಣ್ಯಸಮುದ್ರಗಂಭೀರ ॥ ೧ ॥ ದಶರಥನಸುತರಿಬ್ಬ
ಹುಡಗರುವಸುದೆಯೊಳಗತ್ರಿಶೋಭಿಪರಂತೆಕುಶಲದಿಂ
ಖರದೂಷಣತ್ರಿಸಿರರಪೆಸರಡಗಿಸಿಯೆಸದಿಹರಂತೆ ॥ ೨ ॥
ರಾಘವನೆಂಬಾತನಿಗೋರ್ವಳು। ನಾಗಕನ್ನಿಕೆಯಪೋ
ಲುವಳಂತೆಪೋಗುವೆನಾಕರತರುವದಕೆನೀ ಪೊಂಮೃಗ
ವಾಗಿನಲಿದಾಡಬೇಕಲ್ಲಿ ॥೩॥ ರಾವಣನೀಬಲುಸಾಹಸಿ
ಯೆಯ್ಯ। ದೇವರ್ಕಳದೇವನುರಾಮಕೇವಲನರಜಲತ್ರಿ
ದಿಜನಿಸಿಭೂವಳಿಯದಿತ್ರಿರುಗಾಡುವರವರು ॥೪॥ ತ
ತ್ಕಾಂತೇಯತಂದರೆವಂಶಕ್ಕೆ। ಮತ್ಕಂಟಕವಲ್ಲದೆಸು
ಖವೇ ॥ ತತ್ಸಂಗತ್ರಿಬೇಡನಿಧಾನಿಸುಮತ್ಕಿಂಚಿತ
ಮಾತನೀಕೇಳೂ ॥೫॥ ಸಾಕೆಲವೊಬಲ್ಲೆನುನಾನುಯಾ
ಕವರನುಕೊಂಡಾಡುವೆಯೊನಾಕೊಲ್ಲುವೆ ಪೋಗದಿದ್ದ
ರೆಯನೆತಾಕೈಮುಗಿದೈದುವೆನೆಂದ ॥೬॥

ರಾಗ ಪಂತುವರಾಳಿ ಅಟತಾಳ.

ಪೋಗುವೆದಂಮೃಯಪೋಗುವೆನಿಂನಕ್ರೈಯಶ್ರಿಪೆಟ್ಟ
ತ್ರಿಂಬುದರಿಂದ ನರಕವೆಸಾಧ್ಯ ವಾಹುದು ತ ನಗೆಂ ದ
ರಾಮುನಬಾಣದಿ ಸತ್ತರೆ ಯ ನಗೆ ಯಿಾ ರೇ ಳು ಲೋಕದ
ಮೋಕ್ಷವಪಡೆವೇ ||೧||

ವೃತ್ತ || ಮಾರೀಚಂಪೊಂಮೃಗವಾಗಿಪಂಚವಟ
ಗಂ ಬಂದಲ್ಲಿ ಪ್ರೋಡ್ಯಾಡಲು | ಸಾರಮ್ಯಾತಿಶಯಪ್ರ
ಧಾನಕರದಿಂಕಂಡಾಗಲಾಜಾನಕಿ | ಚೋರತ್ವಂಗಳ
ಮಾಯದಾಕೃತ್ರಿಯನೆಂದಾಕಾಂತೆತಾಕಾಣದೆ | ನಾರಿ
ವಿಸ್ಮಿತೆಯಾಗಿಕಾಂತನೆಡೆಗಂಬಂದಾಗಲಿಂತೆಂದಳು

ರಾಗ ತೋಡಿ ಆದಿತಾಳ.

ಅಡವಿಯೊಳಗೆರಾಮುಯಿರುವವೇಳ್ಯದೊಳೆಂದುಕ
ಡುಚಲುವಿನಮೃಗಬಂತು ಶ್ರೀರಾಮ || ೧ || ನೋಡಿ
ಜಾನಕಿಬ್ರಮೆಮಾಡಿ ತಂನರಸ ನಕೂ ಡೆ ಬೇಡಿದ ಳು
ಯೇಕಾಂತದಿಂದ ||೨||

ರಾಗ ತೋಡಿ ಅಟತಾಳ.

ನೋಡಿದೆಯಾ ರಾಮಾ ನೋಡಿದೆಯದೊಡ್ಡಕಾಡಿ
ನಿಂದಪ್ರೋಡಿಬಂದುಆಡುವಂಥಪೊಂಮೃಗವಾ || ಚಿಂನ
ದಹಾಗಿರುವ ಮೈಯು|ಬಂಣದ ಸುತ್ತಲುಪಂಚವರ್ಣದ
ರೇಖೆಯು| ಬಂದಛಂದವನೋಡುಸಂಣ | ಸಂಣಕಾ
ಲಚೆರಳು ಸಾಲಿನುಗುರುಭಾವಂಗಳುತಂನಂಗಧಿಂ ನಂಗ
ಧಿಕ್ಕಿಟತೋ | ಯಂದುಕುಣದಾಡುವಮೃಗವ||೨||

ಜಗದೇಕಾವೀರನೆಕ್ಕೈಯುಮುಗಿದುಬೇಡುವೆದಂಮ್ಮೈಯು ಹಗಲುಯಿರುಳುಕುಣಿಸಿಕೊಂಡು। ಸೊಗಸೊಗಿರುವೆನು। ಸುಗುಣನಿನಗೆನಾಬೇಕೆಂಬಬಗೆಯುಲ್ಲಿಸ್ನೇಹವಿದ್ದರೆ। ಅಗಲಿಪ್ಪೋಡಿಹೋಗದಮುಂನ।ಮ್ಯೃಗವಹಿಡಿದು ತಾವೋಹಂನ ॥ ೭ ॥

ರಾಗ ಕೇತಾರಗೌಳ ಅಟತಾಳ.

ಅರಸಿನೀಸುಂಮನೆಬ್ರಮೆಗೊಳ್ಳಬೇಡವೆ। ಸಹಸವ ಮ್ಯೃಗವಲ್ಲವೆ। ಸರಶಿಜಾಂಬಕಿನಿಂನ। ಮರುಳುಮಾಡಲುಬಂದ। ಗುರುತಾದಕಪಟಕಾಣೋ ॥ ೧ ॥ ಕಪಟದಕೃತಿಯುಂದು ಕಾಂತನೀಯುಂನಚಾಳಿಪುದೆಲ್ಲಬಲ್ಲೆ ನಾನು। ಅಪರೂಪವಿದಕಂಡು ಬಯುಸಿದೆಯುನಗೊಂದು। ವುಪಕಾರಮಾಡೊನೀನೂ ॥೨॥ ನಾಡಮಾತಲ್ಲ ರಾಕ್ಷಸರಮಾಯಕದಿಂದ।ಆಡುವನಾಟ್ಯಕಾಣೆ। ಬೇಡಸುಂಮನೆಕಡ್ಡಿಮುರಿದುಸಾರಿದೆನತ್ತ। ನೋಡಬೇಡದರನೀನೂ ॥ 3 ॥ ಕಾಡಿನಮ್ಯೃಗದಿಂದ। ಕೇಡುಬಂತಾದಡೆ। ನೋಡಿಕೊಂಬೆನುಬಂದುದ । ನೋಡವೆಯುನಗೊಂದುಕ್ಷಣಜೀವನಿಲ್ಲದು । ಜೋಡಿಕೊಂಬೆನ್ನನಿಂಮನು ॥ ೪ ॥ ಕೆಟ್ಟಮೇಲಬುದ್ಧಿಬರುವದುನೀಗಂಟ ಕಟ್ಟಿಕೊಶರಗಿನಲಿ। ಧಿಟ್ಟೆಹೆಂಗುಸುನಿಂನಛಲಬೇಡಯಿದರಿಂದಕಷ್ಟಕಾರ್ಯಗಳಹುದು ॥೫॥ ಎಷ್ಟುಬಾಳಿಸಿದರುಯಿಾಮಾತಕೇಳಿನ। ಬಿಟ್ಟವಳಲ್ಲನಿಂನಸಿಟ್ಟುಬಂದ

ರುಬರಲೀಬಾರದಿದ್ದರೆಪ್ರಾಣ । ಬಿಡ್ಡೆನಾನಿಂನಮೇಲೆ॥ ಅನುಜನವ್ಮೃಗವೆಂನು ತರಲುಪ್ಪೋಪೆನುಬರುವತನಕವೂನುನಿಯುಬಿಟ್ಟು । ವನದೊಳಗತಿತ್ರಿರುಗಾಡಬೇಡೆಂದು । ಧನುಶರಗಳಕೊಂಡನು ॥ ೭ ॥

ಭಾಮಿನಿ.

ಚಂಚಲಾಕ್ಷಿಯೆಕೇಳುಕಾಡಲಿ । ಸಂಚರಿಸುತಿಹವ್ಮೃಗವನೆಸದರೆ । ಪಂಚತುವನೈದಿದರೆವೂಡುವದೇನುನೀನದನು ॥ ಪಂಚಬಾಣನಪಿತನೆ ಕೇಳ್ಳೈವಂಚಿಸುತವ್ಮೃಗವುಡಿದುದಾದರೆ । ಕಂಚುಕವರಚಿಸುವೆನುಚರ್ಮವತೆಗೆದುಪ್ರಿತಿಯಿಂ॥

ರಾಗ ನೀಲಾಂಬರಿ ಝಂಪೆ ತಾಳ.

ಸಹಜಸೌಮಿತ್ರಜನಕನಂದನೆಯುವ್ಮೃಗವುನೋಜಿಕೆಯಾವಳಲ್ಲೈಯಾ ॥ ೧ ॥ ತರಲುಪೋಪೆನು । ಬರುವದನಕಧರಣಿಜಾತೆಯಕಾಯ್ದುಕೊಳ್ಳೈಯಾ ॥ ೨ ಸ್ವಲ್ಪಕೆಲಸಕೆಸ್ವಾಮಿ । ಪೋಪ್ಪದೆಸೀಗ್ರದಿಂದಲೆತರುವೆವ್ಮೃಗವನೂ ॥ ೩ ॥ ಆಗದಾಗದುಸಾಗವಾವ್ಮೃಗ। ಬೇಗದಿಂದಲೆತರುವೆಲಕ್ಷ್ಮಣ ॥ ೪ ॥ ಎಷ್ಟುದಿವಸಕೇಬರುವೆರಾಘವ । ಶ್ರಿಷ್ಟಿಜಾತೆಯುನಾನುವೊಬ್ಬನೆ॥ ೫ ॥ ನಿಮುಷವಾತ್ರಕೆಬರುವೆಲಕ್ಷ್ಮಣ । ಅನಕಸೀತೆಯಕಾಯ್ದುಕೊಳ್ಳೈಯಾ ॥೬॥

ವಾರ್ಧಿಕ ॥ ಎನುತತಂವುಗೆಬುದ್ಧಿಯಂಪೇಳಿವಾಕ್ಷ

ಣಕೆ । ಕನಕಮೃಗವಂರಾಮಬೆಂಬೊತ್ತಿದರೆಬೇಗ ।
ಘನತರದಘೋರಡವಿಗೈಯ್ದಿತ್ತಾ । ದನುಜಮೃಗರಾ
ಘವಂಕೋಪದಿಂ ॥ ದಣದು ಶರವಂಬಿಡಲುವ್ರೋಲ
ಕ್ಷ್ಮಣಾಯಂದು । ಧನಿಗೈಯ್ದುಮಾರೀಚಪ್ರಾಣವಂ
ಬಿಡಲಾಗಿ । ವನಿತೆಜಾನಕಿಕೇಳ್ದು ರಾಮನೇಸರಿಯಂ
ದು । ಲಕ್ಷ್ಮಣನೊಳಿಂತೆಂದಳೂ ॥೧॥

ರಾಗ ತೋಡಿ ಆದಿ ತಾಳ.

ಮುಗುದಕೇಳಿದೆಯೇನ್ನೈಮೃಗವಲ್ಲರಾಕ್ಷಸರುರ
ಘುವೀರನನುಹೊಹೊಕೊಲ್ಲುವರೇನ್ನೈ । ಜಗದೇಕಾ
ವೀರಕೂಗುವಧ್ವನಿಕೇಳಿತು। ಮಿಗುವರಿಯಿತುಕಾರ್ಯ
ಸಾಮಿತ್ರಾ ॥ ನೋಡಿಬಾರೈಯಪೋಗಿಯೇನಾಯಿ
ತೆಂದು ॥೧॥ ರಾಮನಧ್ವನಿಯಲ್ಲಜಾನಕಿಕೇಳು । ಯಾ
ಮಿನಿಶಾಚರರುಸಾವಾಗ। ತಾಮಸದಿಂದಕೂಗಿದಲ್ಲದೆ
ಸಂಗ್ರಾಮಭೀಮನಧನುಜರುಕೊಲ್ಲುವದುಂಟೆ ॥೨॥
ಎಷ್ಟಹೇಳಿದರೇನುಯಂನರಸನಧ್ವನಿ । ಅಷ್ಟಕ್ಕೆ ಸಾ
ನದರಅರಿಯೆನೇ ನೊ। ಶ್ರಿಷ್ಟಿಪಾಲಕಪ್ರಾಣದಟ್ಟಳಿ
ಗೆನಿಲ್ಲದೆ। ಬಿಟ್ಟುಸುಂಮನೆನಾನೆನವೆವ್ಯಾಕ್ಯೈಯ ॥೩॥

ರಾಗ ಶಂಕರಾಭರಣ ಅಟ ತಾಳ.

ದೇವಿಕೇಳ್ದೃಡ೦ರಾಮಚಂದ್ರನು।ದೇವತಾಂಶಜಸಂ
ಜೀವನಲ್ಲವೆ॥ಆವಿಭುಸ್ವಹತಂತ್ರಮೂರ್ತಿಯು।ಆವಸಾ
ದರುಕೊಲ್ಲಲಾಪನೇ ॥ ೧ ॥ ಏನುಲಕ್ಷ್ಮಣಮನದಸಂ

ಶಯ । ಆನರೇಂದ್ರಗೆಪ್ರಾಣಸಂಕಟ ॥ ನೀನುಸುಂಮನೆ
ತಡವಮಾತದೆ । ಪ್ರಾಣನಾಥನನೋಡಿಬಾರೈಯ ॥
ತಾಯೆಕೇಳ್ವಾವ್ವರಾಕ್ಷಸರ್ಗಳ್ । ಮಾಯವಲ್ಲದೆ ಶ್ರೀ
ರಾಮನೇಯಲ್ಲ ॥ ೩ ॥ ಈವನಾಂತ್ರದಿಬಿಟ್ಟುಪೋದರೆ
ಕಾಯಜೋಪಮಾಕೋಪಿಸುವನೂ ॥ ೪ ॥ ಬಾಲಕ
ನಿಂನಭಾವವೇನ್ನೈಯ । ಶ್ರೀಲಲಾಮನುಅಳಿದವೇ
ಲೆಯುೞುಆಳುವೆನೆಂಬಆಶೆಯಿಂದಲಿ । ಆಲಶ್ಯದಿಂದಕು
ಳಿತೆನಿಶ್ಚಯ ॥೫॥

ವಾರ್ಧಿಕ॥ ಕಾಮಿನಿಯಕಟಣತರವಾಕ್ಯಮಂಕೇ
ಳ್ದುಶ್ರೀ । ರಾಮರಾವಮಾಯಂದುಕರ್ನವೆರಡಂಮುಚ್ಚಿ
ಭೂಮಿಯೊಳಗೇಳಾಜ್ಞೆಯಂಬರದಿದನುಮೀರಿಅಡಿ
ಯಿಡದಿರೆಂದುಸೂಚಿದ್ದು ॥ ಸೋಮಾರ್ಕಭೂಮಿದೇವಿ
ಯಸಾಕ್ಷಿಯಂಮಾಡಿ । ತಾಮನದಿನೊಂದುಕೊಂಡಾ
ಕ್ಷಣದೊಳೈದಿದಂ । ರಾಮಚಂದ್ರಪಾದದೆಡೆಗಿತ್ತಲಾದ
ವೃತ್ತಾಂತಂಗಳಂ ಲಾಲಿಸೀ ॥೧॥

ರಾಗ ಸೌರಾಷ್ಟ್ರ ತ್ರಿವುಡೆತಾಳ.

ದೇವಲಕ್ಷ್ಮಣನಿಂತುಮಣದ । ದೇವಿಯರಬಳಿಯಿಂ
ದಪೋಗಲು । ದೇವತೆಯರಿಗೆಶರೆಯಬಿಡುವಂಥಕಾಲ
ಬಂತು ॥ ೧ ॥ ಕಾವಿವಸನವುಕೈಯಜಪಸರ । ಕೋ
ವಿದಂಡಕಮಂಡಲಂಗಳು । ರಾವಣನುಸಂನ್ಯಾಸಿವೇ
ಷವತಾಳಿಬಂದ ॥೨॥

ರಾಗ ಕಲ್ಯಾಣಿ ಅಟತಾಳೆ.

ಭಿಕ್ಷವನೀಡೆದೇವಿಸಂನ್ಯಾಸಿಗೆ । ಭಿಕ್ಷವನೀಡೆದೇವಿ ॥ ಕುಕ್ಷಿಗಾಧಾರವಿಲ್ಲದೆದೇಶದೇಶಪ್ರದಕ್ಷಿಣೆಗೈಯಿಲ್ಲಿಬಂದೆಕಾಣಂಮ ॥ ಯಾವದೇಶನಿಮಗ್ಯಾವರಾಜ್ಯವಂಮ । ಯಿವಿಪಿನದೊಳೊಬ್ಬಳಿರುವೆಯಾಕೆಸುರರೊ ಕಿಂನರರೊ ಭೂಸುರರೊ ದಾನವರೊ ಯೆಂದರಿಯದೆನಾ ಕೇಳ್ವೆಪರಿಯಕಾಣಂಮ ॥೧॥

ರಾಗ ಶಂಕರಾಭರಣ ರೂಪಕ ತಾಳೆ.

ಲೇಸಾಯಿತ್ತೈಯಸಂನ್ಯಾಸಿನಿಂಮಚರಣಕ್ಕೆ । ನಾಶಿರಶರಣೆಂಬೆನಾನು । ಬೇಸಾರಿಟ್ಟಿತುನಿಂಮಪಾದದರುಶನದಿಂದಸಂತೋಷವಾಯಿತುಪಾದಾಯುಗವಾ ॥ ೧ ॥ ದೇಶಅಯೋಧ್ಯಾಪುರವಾಸಿಗಳೈನಾವುಆಸೂರ್ಯವಂಶದರಸುಗಳು । ವಾಸಿಪಂಥದಮೇಲೆಅನುಜನುಸಹಿತಿಲ್ಲಿ ವಾಸವಾಗಿಹನೆಂನರಮಣ ॥ ೨ ॥ ಕಂಡೊಂದುಮೃಗವಾಪೇಕ್ಷಿಸಿದಕಾರಣದಿಂದ । ಕೊಂಡುಬಾಹರೆವಾಮ ಪೋದಪುಂಡರೀಕಾಕ್ಷ ಬಾರದೆಹೊತ್ತಾದುದರಿಂದ । ಅಂಡಲಾವುತತಂಮನಡೆದ ॥ ೩ ॥ ಅಡಿಗೆಪೂಟಗಳೆಂಬ ಗೊಡವೆಯುನಮಗಿಲ್ಲ । ಅಡವಿಯಫಲಹಾರದೊಳಗೆ । ಕೊಡುವೆನೆಂದರೆತಂಮನಾಜ್ಞೆಯಮೀರಿಮುಂದಡಿಯಿಡಬೇಡವೆಂದೆನುತ ॥ ೪ ॥

ರಾಗ ಕಲ್ಯಾಣಿ ಅಟ ತಾಳೆ.

ನೀವನಹೇಳುವದ್ಯಾತಕೆನಾದೇಹಿಯೆಂದರೆನಾಸ್ತಿ
ಯೆನಬಹುದೆ। ಶಿವನಾಣೆನಾಮೂರುದಿವಸಗಾ ರಾಬ್ಯ
ಆಹಾರಗೊಳ್ಳದರೀತ್ರಿಹ್ಶಿದುಬಂದವನೊಳು ॥ ೧ ॥ ಧ
ರ್ಮವುಳ್ಳವರುನೀವುದಾಕ್ಷಿಣ್ಯಾಸ। ತ್ಕರ್ಮದಿನಡ
ವವರುವರ್ಮವಿಡಿದುನಾವುಶಖ ಸಿಪೋದರೆವಂಶನಿರ್ಮೂ
ಲವಸುದುಕಾಣೆಈಶ್ವರನಾಣೆ ॥ ೨॥ ಧನುಜರಟ್ಟುಳಿ
ಬಾಧೆಗೆಅಂಜಿನಿತುದಿವೊಸೆಯಲ್ಲಿಬರದಲ್ಲದೆ। ಯಿನಿತು
ಬಂದವರಿಗೆಭಿಕ್ಷವಕೊಡಬೇಡೆಂದೆನುತ ಪೇಳಿದವೊ
ತುಂಟರಾಮನಕಾಂತೆ ॥೩॥

ವಾರ್ಧಿಕ ॥ ನಾನಾಪ್ರಕಾರದಲಿಖಳಕಪಟವೆಂನುಡಿ
ದು। ಮೌನಿಯವನದ ಸಂಶಯನಿವೃತ್ತಿಯಮಾ
ಡೆ। ಯೇನುಬಂದರುಬರಲಿ। ಯನುತಾಜ್ಞೆಯಂದಾ
ಟುತವನಿಸುತೆನಡೆತಂದಳೂ ॥ ದಾನವನುತನಗೆಸಿಕ್ಕಿ
ದಳೆಂದುನಲಿಸಹಿತ। ಮೌನಿಯರಥದಿಕುಳ್ಳಿರಿಸಿಕೊಂ
ಡೈದಿದಂ। ಭಾನುಮಾರ್ಗದಿಬರುವವೇಳ್ಯ ದಲಿ ಮೊ
ರೆಯಿಟ್ಟಳಾದೀರೆನೆಲನಡುರಲೂ ॥ ೧ ॥

ರಾಗ ನೀಲಾಂಬರಿ ಏಕ ತಾಳ.

ವಿಪಿನಾದೊಳಿರಲುನಾನಿಂದು ವಂದುಕಪಟದಯತಿ
ನಡೆತಂದು। ಗುಪಿತದೊಳೊಯ್ವುಪಾಯಂದುವರಚಪ
ಲಾಕ್ಷಿಕೂಗಿದಳೆಂದು ॥೧॥ ಧರಣಿದೇವತೆಗಳಿರಯೇ।
ತರಣಿನಭಶಶಿಗಳಿರಹಂಸರಸಿಜಭವಗಳಿರಯೇ । ಸುರ

ಮುನಿಗಂದರ್ಪರಿರೆ ‖ ೨ ‖ ದಶರಥಭೂಪನಸೊಸೆಯ । ವರಬಿಸಜಾಕ್ಷರಾಮನರಸಿಯ । ಅಸುರಕದೊಯ್ವಜಾನಕಿಯವಂದಿಸುವೆನು ಜಿಡಿಸಿರೊಸತಿಯ ‖೩‖

ರಾಗ ಕಾಂಬೋದಿ ತ್ರಿವುಡೆ ತಾಳ.

ಹೆಣ್ಣುಜಲಕ್ರಮೆಸಾಕುಯನ್ನಕಂಡುಮರೆಯಿರೊ ರಾಮರಾಮ । ಕಂಣೆರೆಕಾಣಬಾರದೆಯಂ ನವಿಧಿಯೆ ಶ್ರೀರಾಮರಾಮ ‖ ೧ ‖ ಜನಕರಾಯಗೆಮಗಳಾಗಿ ನಾಜನಿಸಿದೆರಾಮರಾಮ।ವನಜಾಕ್ಷಿಭೂಮಿದೇವಿಗೆಮಗಳಾಗಿಹೆ ರಾಮ ರಾಮ ‖ ೨ ‖ ದಶರಥನೃಪತಿಗೆ ಸೊಸೆಯಾಗಿಜನಿಸಿದೆರಾಮರಾಮಬಿಸಜಾಕ್ಷರಾಮನರಸಿಯಾಗಿಜನಿಸಿದೆ ರಾಮರಾಮ ‖೩‖ ಪೊಡವಿಯಾಳುವೆನೆಂದುದೃಡವಾಗಿನಂಬಿದೆ ರಾಮರಾಮ । ಅಡವಿಯೆಗತ್ರಿಯಂದುಬರದನಂಬುಜಭವರಾಮರಾಮ ‖ ೪ ‖

ವಾರ್ಧಿಕ ‖ ಪರಿಪರಿಯದುಃದಲಿಮರುಗಿಬಾಯ್ಬಿಡುತಕೇ । ಸರಿಯವಶವಾದಮೃಗದಂತೆಮಿಡುಕುತ್ತಲಾ।ಧರಣಿನಂದನೆಕಟಣವಾಗಿಭೀಕರಧೀರ್ಗ।ಸ್ವರದಿಂದಕೂಗುತ್ತಿರಲು ‖ ಶರಣಜನರಸಿಕಸಾಧುಗಳರಸಬಲುಧೀರ । ವರಪಕ್ಷಿರಾಜಸಂನಾಕ್ರರ್ಗಸಂಚರಣ । ಸತ್ಪುರಮಕಾರುಣ್ಯಸಾಗರಜಟಾಯುವುಬಂದಾಧಸುಜನಂತಡದನೂ‖ ‖೧‖

ರಾಗ ಶಂಕರಾಭರಣ ಅಟ ತಾಳ.

ಎಲ್ಲಿಗೆಯ್ವೆಯೊಸೀತೆಯಬಿಡುಕಳ್ಳರಕ್ಕಸಜಗಂ
ನ್ಮಾತೆಯ । ವಳ್ಳಿತೆನಿನಗೆಯಿಾರೀತಿಯಕಂಡೆನೆಲ್ಲನಿಂ
ನೆಯವೀಘಾತಿಯ ॥೧॥ ದಾರಿಯಬಿಟ್ಟತ್ತಕಡೆಸಾರೊ
ಯಿಂಥ । ಪಾರುಪತ್ಯಗಳಕೊಟ್ಟವರ್ಯಾರೊ । ಗಾರು
ಗೆಡದೆಪೆಟ್ಟತಿಂನಬೇಡಕೈಮಿಾರಿತುಯಂನದೆಂನಬೇ
ಡ ॥ ೨ ॥ ಕಳ್ಳರುಕದ್ದುಕೊಂಡೊಯ್ವಾಗ । ಕೇಳ್ವ
ದೆಲ್ಲವಿಚಾರವೆಂದೆನಗೀಗ । ವಳ್ಳಿಮಾತನಮೇಲೆಬಿಡು
ನೀನುಬಿಟ್ಟು । ಕಳ್ಳರಕ್ಕಸನತ್ತನಡೆನೀನು ॥ ೩ ॥ ಸ
ತ್ತಪ್ರಾಣಗಳಥಿಂಬಾತಗೆಯಿಂಥ । ದೂರ್ತದುರ್ವಸನ
ವಿದ್ಯಾತಕೆ । ಮತ್ತೆದಾರಿಯಬಿಟ್ಟುಸುಂಮನೆಹೋಗ
ತತ್ತನಡೆನಡೆಘಂಮನೆ ॥ ೪ ॥ ಭಕ್ಷಿಸದನಕಹೋಗೆನು
ನಿಂನಯಿಂದು । ಪಕ್ಷಿರಾಜೇಂದ್ರಹೊಡದವುಂನರಾ
ಕ್ಷಸನದಕಂಡುಬೆದರಿದಯರ । ಡಕ್ಷಿಯೊಳಗೆಖಿಡಿಯು
ದುರಿದ ॥ ೫ ॥ ಬಾಣವಖಗಪತಿಗೆಸದನುಪಕ್ಷಿ । ತ್ರಾಣ
ದೊಳದರಖಂಡಿಸಿದನು । ಕಾಣುತ್ತಗದೆಯಬೀಸಾಡಿ
ದಕಬ್ಬಿ । ಕೇಣದಿಂದಲೆತುಂಡುಮಾಡಿದ ॥ ೬ ॥ ಅಬ್ಬ
ರಿಸುತಬೆಂನತಿರುಹಿದರಕ್ತ । ಕೊಬ್ಬಿಕೈಮುಷ್ಟಿಯಿಂ
ದೆರಗಿದ । ಯಿಬ್ಬರುಸರಿಸಾವುಶಕ್ತಿಗೆಕಾದಲು । ವಬ್ಬ
ರುಬೇರೆಂದ್ಯುಕ್ತಿಗೆ ॥ ೭ ॥ ವರ್ಮವಾದದಲಿಕಾದು
ವನಾವುಸತ್ಯ । ಧರ್ಮಮಾರ್ಗದಲಿಬಾರದುನೋ
ವು । ಶರ್ಮವಿಡಿದುಕಾದಿದೆವಲ್ಲಸೋಲುವಂಮ್ರಗೆಲ

ವುಕಾಣಿಸಲಿಲ್ಲ ॥ ೮ ॥ ಎಂನಜೀವುಂಗುಷ್ಟದೆಡೆಯಲ್ಲಿ
ಪಕ್ಷಿ । ನಿಂನಪ್ರಾಣವು ಯಾವಕಡೆಯಲ್ಲಿಹೇಳಿದಕಪಟ
ವೆಂಪರಿಯಾದೆಪಕ್ಷಿ । ತಂನದೆಂದನುಸತ್ಯಮರೆಯಾದೆ ॥

ರಾಗ ಸೌರಾಷ್ಟ್ರ ತ್ರಿವುಡೆ ತಾಳ.

ಮಾಯಕದನುಡಿಯೆಂದುತಿಳಿಯದೆ । ಕಾಯಧ
ರ್ಮವನುಸುರೆರಾಕ್ಷಸ । ರಾಯಬಡಿಯಲುಬಿದ್ದನಾಜ
ಟಾಯುಶರಣ ॥ ೧ ॥ ವರವಕೊಟ್ಟಳುಸೀತೆರಾಮನ ।
ಚರಣವನುಕಂಡರುಹದನಕ । ಮರಣವಿಲ್ಲೆಂದೆನಲುನ
ಡಡಂಬರದಿಕೊಂಡು ॥೨॥

ಕಂದ ॥ ದುರುಳಂಮಾಯದಿಸೀತಾ । ತರುಣಿಯನೆ
ತ್ತಿಕೊಂಡುತಾನಂಬರಮಾರ್ಗದಲಿ । ಶರಧಿಯದಾಂಟು
ತಲಂಕಾಪುರಕೈಯ್ದೆಲಕ್ಷ್ಮಣಬಂದುರಾಮಗಿಂತೆಂದಂ

ರಾಗ ಕೇತಾರಗೌಳ ಝಂಪೆತಾಳ.

ರಾಘವಸಾಕೇತಪತೆಕೇಳ್ಕಮಲನೇತ್ರನೀಮೃಗವ
ಬೆಂಬೊತ್ತಿಪೋದಪೇಳಲೆನೊಡನೆ ಆಮಹಾಜನಕ
ಸುತೆಅಸುರನುಡಿಕೇಳ್ದು ॥ ೧ ॥ ಕಠಿಣತರಮಾತುಗಳು
ಕಾಂತೆಪೇಳ್ದುದರಿಂದ । ಅಟವಿಗೈತಂದೆನಾನಿಂನರಸಿ
ಕೊಳುತ ॥ ೨ ॥ ಅಂಜುವಳುಜನಕಸುತೆವಬ್ಬಳೆವ
ನದೊಳಗೆ । ಕಂಜಸಖಕುಲಜಾತೆಕೀರ್ತಿವಿಖ್ಯಾತೆ ॥
ಅನುಜಲಕ್ಷ್ಮಣವೀರಪೋಗಬೇಕೈಯ ॥೩॥

ವಾರ್ಧಿಕ ॥ ಮೃಗವಕೊಂದಾದಶರಥಾತ್ಮಜರುಬ

ದಲೊಂದುಮೃಗವನಿರ್ಮಿಸಿಕೊಂಡು ಜಾನಕಿಗೆಕೊಡಲೆಂದು। ಮಿಗೆವಹಿಲದಿಂಬಂದು ನೋಡಿದರೆಪರ್ಣಶಾಲೆಯಲಿಸತಿಯಿಲ್ಲದಿರಲು ॥ ಹಗಲುಕತ್ತಲೆಯಾಗಿ ಸಿಡಿಲೆರಗಿದಂತೆನಾಲಿಗೆಸೆಳೆದು ದೆದೆಯಾರಿಲಕ್ಷ್ಮಣಂನಡುಗಿಕೈಮುಗಿದುನಿಂದಿರುತ್ತಿರಲು ಸೀತೆಯೇನಾದಳೋಯೆಂದು ತಂಮಗೆಪೇಳ್ದನು ॥೧॥

ರಾಗ ನೀಲಾಂಬರಿ ಝಂಪೆತಾಳ.

ಸಹಜಲಕ್ಷ್ಮಣಸರಸಿಜೇಕ್ಷಣ। ಮಹಿತಳಾಸುತೆ ಮಂಜುಳಾಕರೆ ॥ ವಿಹಿತಶಾರದಹಿಮಕರಾನನೆ ।ಗಹನದೀಜಿಟ್ಟುಮೋಸನಾಯಿತು ॥೧॥ ಎತ್ತಪೋದಳೊ ಯೇನನಾದಳೊ ಮತ್ತಕಾಸಿನಿಮಂದಗಾಮಿನಿ । ಪೃಥ್ವಿಜಾತೆಯಕಾಣದೆಂನಯಚಿತ್ತಚಂಚಲವಾಯಿತಣ್ಣಯ್ಯ ॥ ॥೨॥

ರಾಗ ಕಾಂಬೋದಿ ಝಂಪೆತಾಳ.

ಅಡವಿಗಿಡಮರಕಲ್ಲು। ನೋಡಿದರೆಅರಸಿನದ।ಹುಡಿಯಂತೆತೋರುತ್ತಿದೆತಂಮ ।ವಡಲೊಳುರಿತಾಪಬೇರ್ವಿಡಿದುಜಠರಾಗ್ನಿಯಲಿ। ನಡುಗುತ್ತಿದೆಕೈಕಾಲುತಂಮ ॥ ೧ ॥ ನುಡಿವೆನೆಂದರೆಗಂಟ। ಲೆಡೆಯೊಳ್ಕರಗಳನೊತ್ತಿಪಿಡಿದಂತ್ತಿದೇನಾಯ್ತುತಂಮ। ಮಡದಿಜಾನಕಿಯಂಬರತುನವನುಕಾಣದಡಿ। ಯಿಡಲಾರೆನೈಯ್ಯೆಯ್ಯೊತಂಮ ॥ ೨ ॥ ತಂದೆತಾಯಿಗಳು। ಚಂದ

ಬಳಗವುಸಹಿತತೊರದು। ಪಂದೇ ಮನಸಿನ್ನಲಿತಂಮ।
ಯಂದಿಗಾದರುಯಂಸಪಾದವೇಗತಿ । ಯಂದುನಂಬಿ
ಕೊಂಡಿಹಳೆಲ್ಲೊತಂಮ ॥೩॥ ಮುಂದುವರಿಯಿತುಕಾ
ರ್ಯಕಪಟಮೃಗವ್ಯಸನದಲಿ। ನಿಂದುಕೇಡಾಯಿತಲ್ಲೊ
ತಂಮ। ಯಿಂದುನೀಯೇನಹೇಳಿದರುರಾಕ್ಷಸರನಿ। ರ್ಬಂ
ಧಕ್ಕೆಸಿಕ್ಕಿದಳುತಂಮ ॥ ೪ ॥ ಹಾಳುಬದುಕಿಗೆಹೋ
ಗುವಾಗಲೆನಿಂನೊಡನೆ । ಹೇಳಲಿಲ್ಲವೆಮೊದಲೆತಂಮ
ಕೇಳುಮೋರೆಡನರಿಯದಸತಿಯದುರ್ನುಡಿಯ । ಕೇ
ಳಿನೀಬರಬಹುದೆತಂಮ ॥೫॥ ಯೇಳೇಳುಜಲಾಕ್ರಾಂತರ
ಕ್ಕುತಪವಗ್ಯೆಯದ್ದ್ರೆಯಿಂಥಬಾಲೆಕೈಸೇರುವಳೆತಂಮ।
ಖೂಳರಕ್ಕಸರನಿರ್ಬಂಧದುಃಖವನೆಂತು । ತಾಳುವ
ಳೊದಿನದಿನಕೆತಂಮ ॥ ೬ ॥

ರಾಗ ಪಂತುವರಾಳಿ ರೂಪ ತಾಳೆ.

ಅಗ್ರಜಾಮುಹಾಪರಾಕ್ರಮಧೀರವೀರ ಅಗ್ರಜಾ ॥ ಪುಂ
ಡರೀಕವದನಸುಪ್ರೆ। ಚಂಡಸಾಹಸಗ್ರಗಂಣ್ಯ । ಕುಂ
ಡಲೀಶಯನಸದ್ಭು। ಮಂಡಲಾದಿನಾಯಕ। ಖಂಡಪ
ರಶುಮಿತ್ರರಾಜಿತಸಕಲಬ್ರಂ। ಹಾಕ್ರಂಡಸರ್ವಲೋ
ಕಪೂಜಿತನಿಖಿಳಬ್ರಂಹಾಂಡಸರ್ವನಿಸಿತಭಾಷಿತ ॥೧॥
ಲೋಕಮಾತೆಸೀತೆಸಪ್ತಲೋಕಮದ್ಯ । ಲೋಕ
ಬ್ರಹ್ಮಲೋಕವಿಷ್ಣುಲೋಕಸಿವನ। ಲೋಕದಲ್ಲಿಯು
ಸ್ಥರು । ನಾಕರದುಕೊಂಡುಬರುವೆನುನಿಂಮಪಾದ।

ದಾಕಮಲಬದೆಡೆಗೆತೆರೋಪರ್ನನುಯಿಂದಕೆಚಿಂತೆ। ಯಾಕೆ
ಧೈರ್ಯನಾಗಿರೊನೀನು ॥ ೨॥ ಯೆಂದುರಾಮನನುಜ
ಕೋಪ। ದಿಂದಧನುಶರವಪಿಡಿದು। ವಂದಿಸುತ್ರಪರ್ಣ
ಶಾಲಿಯಿಂದಪೊರಟವೇಳ್ಯದಲ್ಲಿ। ವಂದುಘಳಿಗೆವ
ಡಂಬಡೀಸಿದಾ। ತಂಮನನುಸದೊಳಿದ್ದಕ್ಲೇಶವೆಲ್ಲಬಿಡಿ
ಸಿದನಡದರೀರ್ವ। ರೊಂದುಬುದ್ಧಿಯಿಂದಲರಸುತ॥

ರಾಗ ಕೇತಾರ ಗಾಳ ಆದಿ ತಾಳ.

ಇದುಸಮಯ ಯಿದುಸಮಯ। ಇದುಸಮಯವ
ಲ್ಲ॥ ಮೊದಲೆಜಾನಕಿಯಂಬರತುನವನುಹೋಗಾಡಿ।
ಅದಮರತುಬಂದಿದಿರಾಗಿ ಪೋಗುವದು ॥೧॥

ದ್ವಿಪದೆ॥ ರಾಮಲಕ್ಷ್ಮಣರುಗಳುರಣಪರಾಕ್ರಮ
ರು। ಆಮಹಾಪಂಚವಟಯಿಂದನಡೆತರಲೂ ॥೧॥ ಕಾ
ನನಾಂತ್ರದಲಿತಪಶಿರುವ ಋಷಿಗಳನು। ಜ್ಞಾನಶರಧಿಗ
ಳೆನಿಪಋಷಿಪತ್ನಿಯರನು ॥ ೨॥ ಕಾಣುತಲೆಬೆಸಗೊ
ಳಲುಕಂಡುಖಗಮೃಗವ। ಮೂನಿನಿಯಕೇಳಿದರುಮ
ತ್ರಕಾತುಕವ ॥ ೩ ॥ ನಾನಾಪ್ರಕಾರದಲಿಅರಸಿನಡೆತಂ
ದು। ಆನರೇಶ್ವರರುಘೋರಡವಿಯುಳಿನಿಂತು ॥ ೪ ॥
ಹುಲಿಕರಡಿಸಿಂಹ್ವಶಾರ್ದೂಲಗಳನೋಡಿ। ಕಳವಳಿ
ಸುತತಿಧೈರ್ಯದಿಂದ ಮಾತಾಡಿ ॥ ೫॥ ಹರಿಣನರಿಶರಭ
ಕಾಡ್ಗೋಣಗಳಹಿಂಡಾ। ಪರಿಪರಿಯಬಿಲಗಳಲಿಮೆರೆ
ಯೆಮೃಗಶಂಡ ॥ ೬ ॥ ಅರಸಂಕೆನವಿಲುನೈದಿಲಚೆ

ಕೋರಗಳ | ನೆರವೃತಿಹನದಿಗಳನುದಾಟದರುಬಹಳ ||
ದೂರಪಥದಲಿನಡದುದಣದರತಿಕಾಯ | ದಾರಿಯಲಿ
ಮಲಗಿರಲುಕಂಡರುಜಟಾಯುಾ || ೮ || ಯಿಾತನಂವ್ಯೆ
ಯನಿಗೆಸಖಅರುಣಾತನುಜ | ಮಾತನಾಡಿಸುತಂಮುಸಂ
ಪಾತ್ರಿಅನುಜ ||೯|| ಆರಿಂದಬಂತುನಿನಗೀಮರಣದೂ
ಸಗೆ | ಆರಮಗರ್ಸರೇನುಯಂದುದಯವೆಸಗೇ ||೧೦||
ಕಾರಣೀಕರುನಿಂತು ಕೇಳಿದರುಮಾತ | ಶ್ರೀರಾಮ
ನೇಯಂದುನೆರೆತ್ರಿಳಿದನಾತ || ೧೧||

ರಾಗ ತೋಡಿ ತ್ರಿವುಡೆ ತಾಳ.

ಪಾಲಾ ಯರಘುವೀರಪರಮಪವಿತ್ರ| ಮೂಲೋಕ
ಕದೊಡೆಯನೆಕೇಳುಬಿಂನಪವಾ || ಖೂಳರಾವಣಕ
ದ್ದುಕೊಂಡುಜಾನಕಿಯನು | ಮೇಲ್ಮಾರ್ಗದಿಪೋ
ಪಮೇಳ್ವ್ಯದಿನಾನು| ಬಾಲಕೂಗುವಶಬ್ದಕೇಳಿರಾವಣ
ನೊಳು | ಕಾಳಗಕಿದಿರಾಗಿಕಾದಿದಪೋಗೀ ||೧ ||
ಮುಂಚೆಸಂಗರದಲ್ಲಿಗೆದ್ದೆನಾದಶಶಿರನವಂಚನೆಯಿಯಂ
ನಕೊಂದರಾಜೇಂದ್ರ || ೨|| ತರುಣಿಜಾನಕಿನಿಮ | ಗ
ರುಹಿಸಾಯೆನುತಲತೆರಳುತ್ತಲಿಡನಿಷ್ಟದಿನಪರಿ ಯಂ
ತಕರುಣವಿದ್ದಿರಲೆಂದುಚರಣದೆಡೆಯೊಳ್ಬಿದ್ದುಮರಣ
ವಿಟ್ಟ ಜಟಾಯುಖಚರಶ್ರೇಷ್ಠ || ೪ ||

ಕಂ || ಸುವಪುರಿಗೈಯಿದ್ದಪಕ್ಷಿಯ | ವರಪಿತಗೆಸಮ
ವೆಂದುತ್ರಿಳಿದುಸಂಸ್ಕಾರವನು | ವಿರಚಿಸುತಮುತ್ರೆಸೀ

ತೆಯುದುರುಳನಿಗೆ ಸಿಕ್ಕಿದಳೆಂಬ ಪರಿಗಿಂತೆಂದಂ॥

ರಾಗ ಮಾರವಿ ಏಕತಾಳ.

ಸತ್ರರನರಗಿಣಿಸತಿಯರಸಿರೋಮಣಿ ದಶಶಿರನೊಳ ಪಾದಳಲ್ಲೊ ತಂಮ । ದುರುಳಬಾಧಿಸುವನಿರ್ಬಂದಕ್ಕೆ ತಾಮೈಗುರಿಯಾಗಿಬಾಳ್ವಳಲ್ಲೊತಂಮ ॥ ೧ ॥ ಸರಿಣದನೆಪದಿಂದಯಂನಕಳುಹನಿಂನಭರದಿಂದಕ್ಕೈದಳಲ್ಲೊ ತಂಮ । ತರುಣಿಯರಂತರಂಗದನಿಜಪ್ಯಾರಿಗುಅರಿವಡ ಸಾಧ್ಯವಲ್ಲೊತಂಮ ॥೨॥ ತಾನೆಬಯಸೀಪೋದಳೊ ಬಲತಾಕ್ಕರದಿಂದಗಾನನೊಯ್ದನೇನೊತಂಮ ಯೇನೆಂದುತ್ತಿಳಿಯಬಹುದುಅಂತರಂಗವ । ಮಾನಿನಿಯು ರಮನಸುತಂಮ ॥ ೩ ॥ ಮೂಢರಕ್ಕಸತಂನಭ್ರಮೆ ಯಿಂದಾಕೆಗೆಮಾಡದಿರುವನೆನೊತಂಮ । ಕಾಡಿನೊಳಗೆಬಂದುಸಿಕ್ಕಿಮಾನನಿಯಹೊಗಾಡಿಕೊಂಡೆವಲ್ಲೊತಂಮ ॥ ೪ ॥ ರಾವಣನೆಂಬನಿಶಾಚರನಿರುವಂಥ ಠಾವೆಮಗರಿಯೆವಲ್ಲೊತಂಮ । ಯಿಾವಿಪಿನದಿಸುತ್ತಿದಣಿದೆವಲ್ಲದೆಮುಂದೆಜೀವವುಳಿಯದಲ್ಲೊತಂಮ ॥ ೫ ॥

ವಾರ್ಧಿಕ॥ರಘುವೀರಕೇಳೆಂಬುನಿಧಿಮೇರೆದಪ್ಪಿದರು । ಹಗಲರಸನಿರುಳುದಿಸಿಬೆಳಗಿದರು ಜನಕಜೆಯ । ವೃಗುರಿಡೆಯಕಲ್ಪಷಂಸೊಂಕುವುದೆಕಪಟವಾದಿಗಳ ದುರ್ನುಡಿಯಾತಕೇ ॥ ಸಗರಣಿಪಬಿಡುಮುಂದೆನಡೆ ಯಂಬತಂನತಂಮಗೆಪೇಳ್ದಿಬರುತ್ತಿರುವ ಮಾ

ಗ್ಗದಲಿ। ಸಗೆತನದಿಬಾಯ್ಬಿಡುತೊರ್ದರುತ್ತೆಸೂರ್ಪ್ಪನಖಿ। ಮಗಳಧೋಮುಖಿನಡೆತಂದಳೂ ॥ ೧ ॥

ರಾಗ ಕಾಫಿ ಅಟ ತಾಳ.

ತಿನಿಸುಸಿಕ್ಕತುಯನಗೊಂದು ಅವತಣವ ಮಾಡು ವೆಬಂದುಬಳಗಕ್ಕೆಯಿಂದು ॥ ೧ ॥ ಮನುಜರಮಾಂಸ ವಮೆಲ್ಲದೆಬಹು। ದಿನವಾಯಿತದರಿಂದತುಡುಯೆದ್ದು ನ ಲಿದೆಮನೆಗೊಯ್ದೆನಿವರಂನುಕೊಲ್ಲದೆಭೂತಗಳಿಗುಣ ಬಡಿಸುವೆನಾರಕ್ತದೊಳಗೆಗಂಟಲ ತರಿದಿವರುಗಳ್ಗಾಂ ಸ ನೆಂಟುಬಗೆಯ ಮಾಡುವೆನುಶಾಖಗಳಸಂಜ್ಞೆಗಸೊ ಗಸುಚರ್ಮಗಳ ನಂಪುನಂಟರಿಷ್ಟರಿ ಷ್ಟರಿಗಿಕ್ಕುವೆ ಕ ಜ್ಞಾಯಗಳ॥ ೩ ॥ ಎದೆಯಗುಂಡಿಗೆಯಂನೆಮುರಿದುತು ಪ್ಪದಲಿತಾಳಿಸಿಯಂಸೆಯನಿಕ್ಕಹುರಿದು। ಬದಿಯ ಉಗಳನೆನುಗ್ಗರಿದು ಯಂನಮದುವೆಯಾದವನಸಂಗಡ ವುಂಜಿನಡಿದು ॥೪॥ ತಿಂಬೆನೆನುತಬಾಯಕಳೆದುಮೃ ತ್ಯುಬಂದ ಕೆಂಬುದಲಕ್ಷ್ಮಣನುತಾ ತಿಳಿದು। ಅಂ ಬುಬಿಲ್ಲಿನೊಳಿಟ್ಟಶೆಳದುಕೊಲ್ವೆ। ನೆಂಬುದರೊಳು ರಾಮನಿಲಿಸಿದನೊಲಿದು ॥ ೫ ॥ ಕೊಲ್ಲಬಾರದ್ದೆಯು ಯಿಾಹೆಂಣಕೊಂದು। ಫಲವೇನುಸ್ತ್ರೀಹತ್ಯಗಳು ಸಲ್ಲ ದಣ್ಣಕಳವುತಪ್ಪದೆಸಾಕಂಣಹೀಗೆಂದೊಳಗೆ ಸೂ ಚನೆಗೆಯ್ದುಕಂಣ ॥ ೬ ॥ ತಾಟಕಿಯನುಹ್ಯಾಗೆಕೊಂ ದೆಯಿಂಥ। ಬೂಟಕತನದ ಗಾರ್ಯಕೆಂ ನೊಳಿದೆ

ವಿಶ್ವಮಿತ್ರನಪೌತ್ರಿನಿಂದಯಿಂಥದೂರ್ತೆರಾಕ್ಷಸಿಯಂ
ನುತಾಕೊಂದೆನೆಂದ ||೭||

ವಾರ್ಧಿಕ|| ಅಂಣನೆಂತಭಾರ್ಗವಗಳತ್ತಿಳಿದುಲಕ್ಷ್ಮ
ಣಂ | ವುಂನತದಕುಚವೆರಡ | ನಾಸಿಕವಚಳಿದುಚ್ಛೈ |
ತಂನ್ಯದಿಂಕತ್ತರಿಸಲಾಗಧೋಽವುಖಿದನುಜೆ|| ತಂನ
ತಾಯಂಪ್ಪೋಽಲ್ದಳೊ | ಬಂನಬಡುತವಳುಸಾಗಿದಳು
ವೊರೆಯಿಡುತಯಿವ | ರಂನು ಚ್ಯೈವೃತ್ತಸುರೆರಾವು ಲ
ಕ್ಷ್ಮ ಣರುಗಳು | ಯಿಂನುವುಂದೊತ್ತಿಬರೆಖಳಕಬಂ
ಧನ ಕರಗಳಂನುಕತ್ತರಿಸಲಾಗಿಽ || ೧ ||

ರಾಗ ನೀಲಾಂಬರಿ ಏಕತಾಳ.

ಜಯಜಯ ರಾಮಾಚಂದ್ರಜಾನಕಿ ಸದ್ಗುಣಸಾಂದ್ರ
ವಾಯುವೋಽಹರಹಿತ ಶುಭಕಾಯಪಾಹಿ ಮಾಂ||೧||
ಹಿಂದೆಧನುವೆಂಬನಾವುಗಂಧವೇಶನ್ಯಯನಾನು | ಅಂ
ದುಸ್ಥೂಲಸಿರದವುುನೀಂದ್ರಶಾಪದಿ ||೨|| ಬಂದೆರಾಕ್ಷ
ಸಜಲ್ಮಕೆಯಿಂಪ್ರವಜ್ರದಿಂದಸಿರವ | ನಂದುಕಡಿದ ನದ
ರಿಂದಕಬಂದನಾದೆನು || ೩ || ಇಂದುಶಾಪವಿಮೋಽಚನ
ವಂದಿಪೆನೀಕಾಯೆವುಂನ | ಮುಂದೆಶಭರಿಪೇಽಳ್ವಳು
ಪೋಽಗೆಂದಗಂಧರ್ವ || ೪ ||

ಕಂದ|| ಕರುಣಸಿವುಂದ್ಯೆತರಲಾ | ಪರಶಭರಿಯು
ಭಕ್ತಿಯಿಂದರಘುಕುಲತಿಲಕನ| ಚರಣಕೆಪೊರವಂಟಂ
ದಾ | ಗುರುಭಾವದೆಳಂಬುಜಾಕ್ಷಿ ಭಲುತು ತಿಸಿದಳೂ||

ರಾಗ ರೇಗುಪ್ತಿ ಅಟತಾಳ.

ಪಾಲಯಮಾಂಪಾಹಿರಾಮಪರಮನಿಸ್ಸೀಮಕಾಲಭಯವಿನಾಶನಶ್ರೀಲೋಲವೈಕುಂಠದೀಶ ‖ ೧ ‖ ಅಂಗಜಕೋಟಿಲಾವಣ್ಯ ಆಶ್ರಿತಜನವರೇಣ್ಯ ತುಂಗವಿಕ್ರಮಕಾರುಣ್ಯ ಸುಗಿತಲೋಲಾಗ್ರಗಣ್ಯ ‖ ೨ ‖ ಕಬಂಧಪೇಳ್ದಮಾತಿಗೆಬಂದಕಾರ್ಯದರೀತಿಗೆ। ವಿಭರಾಜವರದಯೆಂನಆಭಯವಿತ್ತುಪಾಲಿಸು ‖ ‖3‖

ರಾಗ ನೀಲಾಂಬರಿ ಆದಿತಾಳ.

ಮಧುರತರಾಂಬುಜವದನೆ। ಮದಗಜಸಂನಿಭಗಮನೆ। ಪದುಮದಳಾಯತನಯನೆಪರಮಪತೀಪ್ರತೆ ಶಭರಿ ‖ ೧ ‖ ಪಂಚವಟೀವನದೊಳಿರೆಮಮತರುಣಜನಕಸುತೆ। ವಂಚನೆಯಿಂದಾಧನುಜವೈದನುಸೀತೆಯ ಮೊದಲೆ ‖ ೨ ‖ ಆತನಕಾಣದರಿಂದ ಅರಸುತಬಂದೆನುಕಬಂಧ। ನೀ ತರುಣಿಪೇಳುತಿರೆಬಂದೆವುನಾವಿಲ್ಲಿಗಾಗೀ ‖3‖

ರಾಗ ರೇಗುಪ್ತಿಅಟತಾಳ.

ಮುಂದೆಪಂಪೆಯೊಳ್ಮಾರುತನಂದನನೆಂಬನುಜಾತನಿಂದರಾವಣನಕೊಲಿಸಿಬಂದಳ್ವೈಯನಿಂನರಸಿ । ೧ ‖

ರಾಗ ನೀಲಾಂಬರಿ ಆದಿತಾಳ.

ದಾರಿಯದಾವುದುತರುಣಿತೋರಿಕೊಡೆ। ನಾರಿಮಣಿಯಿಾಗಸರೋವರದೆಡೆಗೆಪೋಗಪೇಳನ್ನೈನಮಗೇ‖

ರಾಘವಕೇಳೀಪಥದಿ|ಸಾಗಿದರಾಸುರವನದಿ|ಯಿಾಗ ಸರೋವರದೆಡೆಯತೋರುವದೇಪಂಪೆಯದು ॥ ೨॥

ವಾರ್ಧಿಕ ॥ ಕರವಮುಗಿದಿಂತೆಂದಶಬರಿಗೊಲಿದಾರಾಮ । ಕರುಣೆಸುತಸದ್ಗತಿಯವುಂದೆಪಂಪಾಸರೊ। ವರದೆಡೆಗೆಬಂದುಮಜ್ಜನವೆಸಗೆಕಮಲದಲಿ। ತರುಣಿಯಂದೇಬ್ರಮಿಸುತಾ ॥ ಸ್ಮರನಬಾಣದವೇಧೆಯಿಂದಸಂತಪಿಸುತ್ತಲಿರದೆಯುನ್ಮತ್ತನಂಕೆಡೆಯೊಳಿಹನಿಜಸಹೋ । ದರನೊಳಗೆಚಿತ್ತಚಾಂಚಲ್ಯದಿಂದುಸುರಿದಂಮನಬಂದತೆರದಿಂದಲೀ ॥ ॥ ೧ ॥

ರಾಗ ನೀಲಾಂಬರಿ ಆದಿತಾಳ.

ಜಲಜದಳಾಯತನಯನೆ । ಜಲಜಮುಖಿಮಹಿತನುಜೆ । ಜಲದೊಳಗೇತಕೆಬಂದುನೆಲಸಿಹಳೈಸತ್ತಿಯಿಂದು ॥ ೧ ॥ ಜನಕಸುತೆಜನರಹಿತೆ । ಮನಸಿಜಮೋಹನರುಚಿರೆ । ಕನಕಮಯೆತನುಪುಳಕೆ । ಮುನಿನಮಿತೆಮಮವನಿತೆ ॥ ೨ ॥ ನಾರಿಯಕೈಗಳನೋಡೊ ತೋರುತ್ತಿದೆಕುಚವೆರಡು । ನೀರೊಳಗ್ಯಾತಕೆಬಂದು ಸೇರಿಹಳೈಸತ್ತಿಯಿಂದು ॥ ೩ ॥ ಕಡುಕಮಲಸಖಕಿರಣ । ಸುಡುತ್ತಿದೆಮೈಯಾಭರಣ । ಗಿಡಮರನತಂಪಿನಲಿ । ಯಿಡುಯಂನಮಮಸಹಜ ॥ ೪ ॥

ರಾಗ ರೇಗುಪ್ತಿ ತ್ರಿವುಡೆತಾಳ.

ರಘುವೀರಾಂಬುಜವದನಯಿಮರುಳುಮಾತಿಗೆ

ಯೇನೆಂಬೆನುಸುಜಾಣ ॥ ಯಿರುಳುಮಾಡುವನೆ ಸೂರ್‍ಯ್ಯಯಿದುಚಂದ್ರನಕಿರಣವಲ್ಲವೆರಾಘವ ॥೧॥ ಸರಸಿಜಮುಖಿಯಲ್ಲವೆನೀರೊಳುಸೀತೆಯಿರುವದುಂಟೆ ರಾಘವ ॥ ೨ ॥

ವಾರ್ಧಿಕ ॥ ಇರದೆಮೃದುವಚನದಿಂದಗ್ರಜನಮೋಹವಂ । ಪರಿಹರಿಸಿಲಕ್ಷ್ಮಣಂಶಿಶಿರೋಪಚಾರದಿಂ । ಸರಸಿಜದಳಂಗಳಿಂತಣ್ಣೀರವಣಿಗಳಿಂ । ತಳಿದುಚೇತನಗೊಳಿಸಲೂ ॥ ತರುನೆರಳನಾಂಕಿರಲುಋಷ್ಯಮೂಕವುಎಂಬಗಿರಿಯಿಂದಕಂಡುವಾಲಿಯಭಯದಿ ಸುಗ್ರೀವ । ಸರಸಿಜೋದ್ಭವಸುತಾದಿಗಳೊಡನೆ ಹತ್ತಿರಕೆಕರದಾಗಲಿಂತೆಂದನೂ ॥ ೧ ॥

ರಾಗ ಮಧುಮಾಧವಿ ಆದಿತಾಳ.

ವಾನರೇಶ್ವರರೆಲ್ಲರುಕೇಳಿಯೇನುಸೋಜಿಗವೆಂದುಯೆಂನೊಳುಪೇಳಿ ॥ ತರಣಿಪ್ರಕಾಶದಿಂದಪಂಪಾತೀರಕೆಬಂದಲ್ಲಿರುವವೀರರ್‍ಯ್ಯಾರೆಂದುನೋಡಿ । ದುರುಳನಗ್ರಜನುಸಂಹ್ವರಿಸಬೇಕೆನುತೆಂನ । ಅರಸಿಬಂಧನೊಯಿಾಗವೀರರೊನೋಡಿಬಾಯಿಾಗ ॥೧॥ ವೈರಿಗಳಾಗಲಿವರಹಿತರಾಗಲಿಮಾರುತಾತ್ಮಜನೀನುನೋಡಿಬಾರೈಚೀರೊಂದುರೂಪಿನಿಂದವರಬಳಿಗೆ ಪೋಗೆಂದು । ಕಾರಣಕರಕಂಡುಕರತಾರ್‍ಯ್ಯೆಯುಮುಂಕೊಂಡು ॥ ೨ ॥

ವಾರ್ಧಿಕ ॥ ಸಾರತರವಾದಸುಗ್ರೀವಪೇಳಿದಮಾ
ತು । ಸಾರೆಕಿವಿಯುಗಳವಂನಾಕ್ಷಣದಿಯಲ್ಲಿಂದ । ಪಾ
ರಿನಿಜರೂಪವಂಬಿಟ್ಟುಬಾಲಬ್ರಹ್ಮಚಾರಿವೇಷವತಾ
ಳಿದೂ ॥ ವೀರರೆಡೆಯನುಸಾರ್ದು । ವಿನಯದಿಂಕೇ
ಳಿದಂ । ಶೂರರಘುಕುಲವನಧಿರಾಕಾನಿಶಾಕರರನಾ
ರುನೀವೆಲ್ಲಿಗೈಯ್ದುವಿರೆಂದೆನುತ್ತಾಗಲಪ್ರೀತಿ ಮಮರು
ದಾತ್ಮಜಾ ॥೧॥

ರಾಗ ಮಾರವಿ ಏಕತಾಳೆ.

ಯಾವಲ್ಲಿಂದಬಂದಿರಯ್ಯಾನೀವುಬಾಲಕರಿರ ।
ಯಾವಲ್ಲಿಗೆಪಯಣವೈಯಜಾಣಬಾಲಕರಿರ ॥೧॥ ವೂ
ರೆಲ್ಲಿಪುದುತಾಯಿತಂದೆಯಾರುಬಾಲಕರಿರ । ಘೋರ
ರಣ್ಯಕಿತ್ತ್ರಕಳುಹಿದರ್ಯ್ಯಾರುಬಾಲಕರಿರ ॥೨॥ ಕಾನ
ನಕಾನನಹುಡುಕುವದೇನುಬಾಲಕರಿರನಿಂ । ಮಾನ
ನವೇಕೆಬಾಡಿದೆಜಾಣಬಾಲಕರಿರ ॥೩॥

ರಾಗ ಕೇತಾರಗೌಳ ಅಟತಾಳ.

ಧರೆಯೊಳತ್ಯಧಿಕವೆಂದೆನಿಪಯೋಧ್ಯಾ । ಪುರದರ
ಸಿನಸುತರುನಾವು । ಪರಪಿತನಾಜ್ಞೆಯಿಂದಡವಿಯೊಳ್
ಹದಿನಾಲ್ಕುವರುಷಯಿಲ್ಲಿರಬೇಕೆಂದು ॥೧॥ ಹಿರಿಯಾ
ತನಾರಾಮತಮ್ಮಲಕ್ಷ್ಮಣನೀತ ಭರತಶತ್ರುಘ್ನರೆಂ
ಬರಿರುವರುರೊಳಗಿರ್ದಾರನುಜರುಯನಗೀಗ । ತರುಣಿ
ಜಾನಕಿಯಂಬಳ ॥ ೨ ॥ ದುರುಳರಾವಣನಾನಿಲ್ಲಿರದ

ಪೇಳ್ವದಿಸೀತಾ । ತರುಣಿಯನೊಯ್ದನಿಂದುಶರಣ ಜಟಾಯುಪೇಳ್ದುದರಿಂದನಾವಿಲ್ಲಿ । ಅರಸಿಕೊಂಡ್ಯೆತಂದೆವು ॥೩॥ ತೋರುವೆಗಿರಿಯಾವದದರೊಳಗಿರುವಾತನ್ಯಾರುನಿಂನಯಪೆಸರು । ಆರವಗನುಬಂದುದ್ಯಾಕಿಲ್ಲಿಯುನಲಾಗಪ್ಪಾರುತಿಶರಣೆಂದನು ॥ ೪ ॥

ರಾಗ ದೇಶಿ ಅಟತಾಳ.

ಪಾಹಿಪಂಕಜದಳಲೋಚನಮುಕ್ತಿದೇಹಿ । ಅಹಾಲ್ಯಶಾಪವೋಚನಸತ್ಯಮಹಾಂತಗುಣನಿಧಿ । ಮಹಿಮಸಜ್ಜನಪಾಲ ॥ ೧ ॥ ಅಂಗಜಪಿತನೆಪಾಪನಾಶನದೇವ್ರೋತ್ತುಂಗವೃತ್ತಮಗರುಡಾಸನಬಾಣ । ಭಂಗನೀಲನಿಭಾಂಗಸೀಲವೇದವೇದಾಂಗ ॥ ೨ ॥ ಲೋಕನಾಯಕಸದ್ವಿಚಾರಣಭವ । ನೇಕದುರಿತಸಂಹಾರಣರಾಮ । ಸಾಕೇತಪುರವಾಸಶರಣುರಾಮಚಂದ್ರೇಶ ॥ ೩ ॥

ರಾಗ ಕೇತಾರಗೌಳ ಅಟತಾಳ.

ನಿಜವೇಷವಿದನೋಡೊಸನುಮಂತನಾನಿಂನಭಜಕನಾಗಿರುವೆನೈಯ । ಅಜಸುರಾದಿಗಳುಪೂಜಿಸುವಂಥಪಾದದ । ನಿಜಭಕ್ತಿಯನಗೀಯೊರಾಮನಿಸ್ಸೀಮ ॥೧॥ ಹಿಂದೆಬಾಲ್ಯದೊಳೆಂನತಾಯಿಅಂಜನದೇವಿ । ಯಂದುಪದೇಶದಿಂದೆನಗಾಯಿತ್ಯೆಯ । ಸಂದರುಶನದಿಂದಸಫಲವಾಯಿತು ಜನ್ಮ । ಯಂದೆಂದುಮನದಿಷ್ಟವೀಯೊನೀಕಾಯೊ ॥೨॥ ಸುಗ್ರೀವನೆಂಬಮರ್ಕಟರಾಜನಿಂ

ಪಾದ| ನುಗ್ರಹವೇಕ್ಷಿಸಿಕಳುಹಿದನೆಂನ ॥ ಅಗ್ರಜವಾ
ಲಿಭಯದಿಂದಪರ್ವ| ತಾಗ್ರದೊಳಿಹದಯ ಮಾಡಬೇ
ಕಲ್ಲಿ ॥ ೩ ॥

ಕ ॥ ಈಪರಿಯಿಂದಾವರಾರುತಿ । ಭೂಪಾಲರನು
ನಿಜಪೆಗಲೊಳ್ಧರಿಸಿಯೆುವುತ್ತಾ । ಆಪರ್ವತಕ್ಕೈತಂದಿ
ವರತಿ । ರೂಪೋದಯಚರಿತವನುಪೇಳ್ದಭಾಸ್ಕರಸು
ತಗಂ ॥೧॥

ರಾಗ ನೀಲಾಂಬರಿ ಝಂಪೆತಾಳೆ.

ಭಾನುನಂದನವಾನರೇಶ್ವರನೀನುಲಾಲಿಸುಮಾನ
ಸನಿಟ್ಟು ॥ ೧ ॥ ರಾಮನೀತನುರಾಜಿವಾಕ್ಷನು । ಭೂ
ಮಿಪಾಲಕಭಾನುವಂಶಜ ॥ ೨ ॥ ಸಾಕೇತಾಧಿಪನಾದ
ದಶರಥನಕುಮಾರರುಅನುಜಲಕ್ಷ್ಮಣ ॥ ೩ ॥ ಶಾತ
ಕೈಕೆಯಮಾತ್ರಿಗೋಸುಗ । ಯಾತರಾಘವಸೀತೆ
ಯುೂಸಹ ॥ ೪ ॥ ಧಾರುಣಿಪತಿಧರ್ಮಮಾರ್ಗದಿ।
ಆರಣ್ಯದಲ್ಲಿಚರಿಸುತ್ತಲಿರೆ ॥ ೫ ॥ ಪಂಚವಟ್ಯದಿಪಾ
ಪಿರಾವಣ । ವಂಚನೆಯಿಂದವೈಯ್ದಸೀತೆಯ॥ ೬ ॥
ಕೊಂಡುಪೋದರಿಂಕಾಡದಾರಿಯ । ಕಂಡುಕೊಳ್ಳು
ಕೈತಂದರಿಲ್ಲಿಗೆ ॥ ೭ ॥ಕಾರಣೀಕರುಕಂಡರೀರ್ವರು
ಸೂರಿಯಾತ್ಮಜಾಸುಲಭರಲ್ಲಯ ॥ ೮ ॥

ರಾಗ ಘಂಟಾರವ ಅಟತಾಳೆ.

ರಾಮಹರೆರಾಮರಾಮಹರೆ । ರಾಮರಾಮಹರೆಪಾ

ಹಮೊಂಬಗು | ಭೀಮಪರಾಕ್ರಮಭಕ್ತರಕ್ಷಕಮಣಿ |
ಕೋಮಲರೂಪಧರೆ || ೧ || ಯಿಕ್ಷ್ವಾಕುವಂಶಭೂ
ಪಾಲರುಧರ್ಮಸಂ | ರಕ್ಷಕರಧಿಕರಲ್ಲೈಮುಪೇಡಿ
ಯಿಂದೊಂದುಂಟುಕೇಳಿಅನ್ಯಾಯವ | ನೀಕ್ಷಿಸಿಸಲ
ಹಬೇಕು || ೨ || ಅಗ್ರಜನಾಗಿಹವಾಲಿ ಪರಾಕ್ರಮಿಅಂ
ನ್ಯಾಯದಿಂದಮಮ | ಸೀಗ್ರದಿಭಾರ್ಯೆಯ ದುಡುಕಿಂ
ದಪಿಡಿದೆಂನ | ನಿಗ್ರಹಿಸಲುಭಯದಿ || ೩ || ಶೌರ್ಯಬ
ಲಾನ್ವಿತನಿದ್ದಪರ್ವತದಲ್ಲಿ | ಸೂರ್ಯನಪ್ಪಣೆಯಿಂ
ದನಾಧೈರ್ಯಗೆಟ್ಟಿರುವೆ ನಿಂ ಪಾದಪದ್ಮವಕಂಡೆಮುರಿ
ಯಾಮೆಯಿಂದಕಾಯೊ || ೪ || ರಾವಣನೆಂಬನಿಶಾಚ
ರನನುಹಿಂದೆ | ಕೋವಿದಪಿಡಿದುತಂದು ತಾರಾದೇವಿ
ಯಂಗದನತೊಟ್ಟಿಲಿಗೆಕಟ್ಟಿದನೀತ | ದೇವೇಂದ್ರಸುಕು
ಮಾರಕ || ೫ || ದೇವತೆಗಳು ಸಹಿತಂಜುವರಣ್ಣನ |
ಠೀವಿಪರಾಕ್ರಮಕೆರಾಮ | ದೇವನಾವಿಬ್ಬರುಜೋ
ಡಾದೆವಿವಾಲಿ | ರಾವಣಧನುಜನಿಂದ || ೬ || ಕಂಣಾ
ರಕಂಡರೆಬಿಡುವೇನೆಸೀತೆಯ | ಯಂನಮನೋಪ್ರೇ
ತೆಯನಿಂ | ನಂಣನಘಾಡೆನು ವಾಲಿಯು ನಾ ಕೊಂದು |
ಮಂಣಕೂಡಿಸುವೆನೆಂದ || ೭ || ಜಾಣನಿನಾದರೆನೋ
ಡುಕೈಯೊಳಗಿದ | ಬಾಣಜಾತಂಗಳನು | ಪ್ರಾಣವ
ಕೊಂದೊಂದುನಿಮುಷದಿನಿಂನಯ | ರಾಣೆಯನಿನಗೀ
ವೆನು .
|| ೮ ||

ರಾಗ ಸಾವೇರಿ ಅಟತಾಳ.

ಆಮುಮುನಾಲಿಯರಾಮಕೊಂದರೆಸತಿ । ರುಮೆ ಯಂನುಬಿಡಿಸಿಲ್ಲಿತಂದರೆ । ನಿಮುಷದೊಳೀಸೇನೆಸಹ ಬಂದುಪಾದ । ಕಮಲಸೇವೆಯಮಾಡುವೆನೆಂದು ॥ ೧ ನುಡಿದಮಾತ್ರಿಗೆಯರಡಿಲ್ಲದೆಯಿ । ಕೊಡುವೆನೆಂಬು ಗೆಯಮಾತಲ್ಲದೆ । ಬಿಡದೆ ಕೈತಟ್ಟಿತೊಬ್ಬೊಬ್ಬ ರುಪೆಂದೆ । ಧೃಡಮನಸಾದರಿಬ್ಬರು ॥ ೨ ॥ ಕಂನೆ ಯಖಿಳಕೊಂಡುಪೋಪಾಗ । ತಂನಚಿಂನಗಳೆಲ್ಲವತೆ ಗದಾಗ । ಯಂನಪರ್ವತಕಿಟ್ಟಡದರಂನುಕಟ್ಟಿ । ಚಿಂ ನಗಿಟ್ಟಿರುವೆನೋಡಿದರಂನು ॥ ೩ ॥ ಎಂದುಸರ್ವಾಭ ರಣಗಳಂನುಬೇಗ । ತಂದುಕೈಯಲಿಕೊಟ್ಟಡದರನು ಯಿಂದಿರೆಯರಸತಾನೋಡಿದಮನ । ನೊಂದನೇ ಕಚಿಂತೆಮಾಡಿದ ॥ ೪ ॥

ರಾಗ ನೀಲಾಂಬರಿ ಆದಿತಾಳ.

ಕಂಜಾನನೆಕಲಕೀರವಾಣಿ । ಸಂಜೀವನೆಸರಸಕ ಲಾಪೆ । ಮಂಜುಳಾತರಂಗಿಣಿಮನೋಹರೆ । ಕುಂಜ ರಗಮನೆನಿಧಾನೆ ॥ ಫಣಿವೇಣಿಯಕುಚಗಳಮಧ್ಯದಿ ಕುಣಿದಾಡುವಸರವಿದೆಸಹಜ । ಮಣಿಕಂಕಣಮು ದ್ರಿಕೆಗಳಸರ । ಪಣಿಯಂದವಬಣಿಸಲೇನೈ ॥ ೨ ॥ ಲೋಲಾಕ್ಷಿಯಕರ್ನದೊಳೊಪ್ಪುವ । ವಾಲೆಯತೆ ಗದಂತ್ರಿಹದಾನನ । ಬಾಲರ್ಕನಜರವಮೂಗುತಿಗಿ

ಟ್ಟನೀಲದಹರಳಿದಕೊಸಹಜ ॥ ೩ ॥ ನೋಡಾಕೆ
ಯಆಭರಣಗಳಲ್ಲಿ । ಚೂಡಾಮಣಿನಾಸ್ತ್ರಿಯಿದರೊ
ಳಗೆ ॥ ಮೂಡಾತ್ಮಕನೊಯ್ವಅಂಜೆ ಕೆಗೆಬಿ । ನಾಡಿ
ದಳೆಲ್ಲಿಯೇನ್ನೈಯತಂಮ ॥ ೪ ॥ ಕಾಲುಂಗುರಬಲ್ಲೆ
ನುಕೂರತಾಗಿ । ಮೇಲಾದುದಗುರುತವನರಿಯೆ । ನಿ
ಲಾಳಾಂಕ ನಿರ್ಮಲಗುಣನಿಧಿನೀಪರಿಚಿಂತಿಸಲೇ
ಕೇ ॥ ೫ ॥

ವಾರ್ಧಿಕ ॥ ಇನಸುತನುಕೊಟ್ಟ ಸರ್ವಾಭರಣವಂ
ಕಂಡು । ಮನಸಿನಲಿನೊಂದುಕೊಂಡವನಾಗಿಮತ್ತೊ
ಡನೆ । ಕನಸಕಂಡೆಚ್ಚರಿಕೆದೋರ್ವಂತೆ ಕ್ಲೇಶಂಗ । ಳ
ನುಮರತನಾಕ್ಷಣದೊಳೂ ॥ ಜನಕನಂದನೆಗಿಡುವ
ಪ್ರಂಚ್ಯವಿರಲವಳುಬರು। ವನಕನಿೀತೆಗದಿರಿಸುಸು
ಗ್ರೀವಯಿಂನುಸುರ । ಪನಸುತನಸಂಗರಕೆಬರಹೇಳಿ
ನಲ್ ಶಕ್ತಿಯನುಪರಿಕ್ಷಿಸುವೆನೆಂದೂ ॥ ॥೧॥

ರಾಗ ಕಾಂಬೋದಿ ಝಂಪೆತಾಳೆ.

ದುಂದುಭಿಯ ಪಡಲ ಸಮರೇಂದ್ರಸುತವಾಲಿಮುದ
ದಿಂದನೆಗಹುವವೊಳನಧರಣಿಯಿಂದ । ವಂದುಕರಪ
ರಿಮಿತದಿಯತ್ತಿದರೆನಿನಗೆನಗೆ । ಸಂದೇಹಹೋಗಿಬಳಿ
ಕೊಂದುಮಥನಮಗೇ ॥ ರಾಘವಮಹಾವೀರಕೇಳು
ಸುವಿಚಾರ ॥ ೧ ॥ ಕಾಲತುದಿಯಿಂದದಶಯೋಜನ
ಕೆಬಿಸುಟ । ಮೇಲೇಳುತಾಳಿಯಮರನಮುರಿಯಬಾ

ಗಿತ್ರೀ। ಲೋಲಶರಣೆಂದುಸ್ತುತಿಗೈಯೆ ಸುಗ್ರೀವ ।
ವಾಲಿಯನುರಣಕೆಬರಹೇಳೆಂದ ರಾಮ ॥೨॥

ರಘುವರನಸಹಸವಂನುಕಂಡು । ಸುಗ್ರೀವ ತಂನ
ಅಗಣಿತಾಧೈರ್ಯದಿಂದಆಕ್ಷಣಾಯುದ್ಧಬಂದ। ನಗತರು
ವಾಯುಧಗಳಲ್ಲಿನಿಂದುಕಿಷ್ಕಿಂದದಲ್ಲಿ। ಅಗ್ರಜಬಾರೇ
ನೆಕೇಳಿಅಗಲ್ಯೆತೆಂದವಾಲೀ॥ ॥೧॥

ರಾಗ ಶಂಕರಾಭರಣ ಮಟ್ಟೆತಾಳ.

ಭಾನುತನುಜಭಳಿರೆ ಯನುಜಬಂದೆಯಾಮಮ ।
ಯೇನುಕಾರಣ ಯಂನಕರದೆಯಲೋಪರಾಕ್ರಮ॥ಪ॥
ಮೂನುನೀಯಬಿಡುವೆದಕ್ಕೆಮನಸುಬಾರದು । ನೀ
ನುಕೇಡುವನೀತಿಯಲ್ಲನಿನಗೆಸಾರಿದೆ ॥ ೧ ॥ ಏನುಧೈ
ರ್ಯದಿಂದಬಂದುಯಂನಕರದೆಯನೀನು ಹಿಂದೆಪಡದ
ಭಂಗಪಲ್ಲಮರತೆಯ ॥ ೨ ॥ ಅಣಕವಲ್ಲ ಅಂದಿನಂತೆ
ಅಂಣರಣದಲಿ । ಸೆಣಸಿನೋಡು ಸಲುಗೆಯಿಂದ
ಶೌರ್ಯಗುಣದಲಿ ॥ ೩ ॥ ಎಂದಮಾತಕೇಳಿಕೋಪ
ದಿಂದಅನುಜಗೆ। ಪೆಂದುಗಿರಿಯಕಳಚಿಬಿಸುಟನಂದು
ಯಿನಜಗೆ ॥೪॥ ಬರುವಗಿರಿಯಕಂಡುದೊಡ್ಡಪರ್ವತಂ
ಗಳ । ಸುರಪಸುತನೆಅಂಗಕ್ಕಿಟ್ಟಥರಥರಂಗಳ ॥ ೫ ॥ಮ
ರಮರಂಗಳುಭಯಬಲದೊಳುರುಳ್ವ। ಗಿರಿಗಳಮರ
ವರಭಸಕಮರರಂಜುತ್ತಿರುವಪರಿಗಳ ॥ ೬ ॥ ಅದ್ರಿ
ಮರಗಳೆಲ್ಲತೀರಿತ್ರಿಬ್ಬರಿಗಿರಿಲಿ । ಗುದ್ದುತೊಡನೆಕ್ಕೈ

ಯ್ಯಕಾಲೊಳೊದ್ದ ಭರದಲಿ ॥ ೭ ॥ ಪುರಕೆ ಮುಷ್ಟಿ
ಯಿಂದತ್ರಿವಿದಭರದಪೆಟ್ಟಿಗೆ । ತಿರುಗಿ ತಲೆಯುಭಾನುತ
ನುಜನೊರಗೆ ಶ್ರಿಷ್ಟಿಗೆ ॥ ೮ ॥ ಬೀಳಲನುಜನಂಗಕೆರಡು ।
ಕಾಲೊಳೊದ್ದನುಮೂಳಹೋಗುಸಾಯೆನುತ್ತಮು
ನೆಗೆನಡೆದನು ॥ ೯ ॥ ಹೋದನಂಣನೆಂದುತ್ರಿಳಿದು ।
ಆಘರೀಸಿದಕ್ರೋಧದಿಂದರಾಥಿಪತ್ರಿಯಮೂದಲೀಸಿದ॥

ರಾಗ ನೀಲಾಂಬರಿ ಝಂಪೆತಾಳ.

ವಿಶ್ವನಾಯಕನಿಂನವಾಕ್ಯವವಿಶ್ವಾಸವೆಂದುನಂಬಿದೆ
ನಿಂದು । ಸೂರ್ಯವಂಶದರಾಯರಾಡಿದಕಾರ್ಯ್ಯತಪ್ಪ
ದುಕಪಟವಲ್ಲಿದು ॥ ೧ ॥ ಯಂನವೈರಿಯಮುಂದೆನಿ
ಲ್ಲಿಸಿಕಂಣೆಲಿಕಂಡೆಚೆಂನವಾಗಿಯೆ ॥ ೨ ॥ ಇಂನುಸಾ
ಕ್ಷೈಯನಿಂನತಳ್ಳಿಯು । ಮಂನವಾಥಿಪಮಂಜುಳಾಕ
ರಾ ॥ ೩ ॥ ಧೈರ್ಯ್ಯನಾಗ್ನೈಯ । ಸೂರ್ಯ್ಯನಂದನಕಾ
ರ್ಯ್ಯವಾಯಿತುಕಪಟವಲ್ಲಿದು ॥ ೪ ॥ ವಾಲಿಯುನಿಂನ
ಕಾಣಲೀರ್ವರಾಳು ಭೇದವಅರಿದಾದೆವು ॥ ೫ ॥
ನಿಂನವೋಸದಿಕೊಲಲುಲೋಕದಿ । ಯಂನನಿಂದಿಸಿ
ಜರವರಲ್ಲೈಯ ॥ ೬ ॥ ಬಾಲಕಾಗಜಪುಷ್ಪದಾನಿಜ
ಮಾಲೆಯಿಟ್ಟರೆಯಿವನಕೊರಳಿಗೆ । ಮಲ್ಲಸಾಹಸವಾ
ಲಿಯುಂನುನಾಕೊಲಲ್ಲವೇಕ್ಷಣಯಿಲ್ಲಸಂಶಯಾ ॥೭॥
ಮಗದಜಾತೆಯಮಗನರೀತಿಯತೆಗದುಮಾಲೆಯಯಿ
ಟ್ಟಡಿನಜಗೆ ॥ ೮ ॥ ತರಣಿನಂದನತೆರಳುಯಿಂನುನೀ
ಟ

ಧುರಕೆವಾಲಿಯಕರದುಬಾರೈಯ ॥ ॥ ೯ ॥

ವೃತ್ತ॥ ಶ್ರೀರಾಮನಾಡಿದಮಾತಕೇಳ್ದುರವಿಜಂಸ
ದ್ಧೈರ್ಯದಿಂದಾಕ್ಷಣಂ । ಶೂರತ್ವಂಗಳತೋರ್ಪೆನೆಂ
ದುಬರುತಾಕಿಷ್ಕಿಂಧದದ್ವಾರದಿಂ । ಘೋರರಾಕಾರದಿ
ಕೂಗೆಕೇಳ್ದುಹರಿಜಂಕೋಪಾಗ್ನಿಯಿಂದೇಳಲು । ತಾ
ರಾದೇವಿವಿವೇಕದಿಂದತಡದುಂಪ್ರಾಣೇಶಗಿಂತೆಂದ
ಳೂ ॥ ॥೧॥

ರಾಗ ಕೇತಾರ ಗೌಳ ಆದಿತಾಳ.

ನೀತಿಯಲ್ಲಪೋಪುದಿದುನೀಕೇಳುಕಾಂತ । ಜಾ
ತಂಗದಪೇಳ್ದುದೊಂದು । ಮಾತಕೇಳಿದೆನಾನಿಂದು॥೧॥
ಪುಂಡರೀಕನೇತ್ರನುಮಾರ್ತಾಂಡಜಾತಸುಗ್ರೀವನು।
ಕಂಡುತಂಮೊಳಂತರಂಗಗೊಂಡೇಕಾಂತದೀ ॥ ೨ ॥
ಚಂಡವಿಕ್ರಮರಾಮನ । ಹೆಂಡತಿಯಂನುರಾವಣ ।
ಕೊಂಡುಪೋದರಕ್ಕಸನಖಂಡಿಸಲಾಗಿ ॥ ೩ ॥ ನಿಂ
ನಕೊಂದಾತನರುಮೆ । ಯುನ್ನುಕೊಟ್ಟೆನೆಂದುಮಂ
ನವಾದಿಪತಿಸತ್ಯ । ಮಂನಿತ್ರನಂತೆ ॥ ೪ ॥ ನಿಂನತಂಮ
ಸೀತಾದೇವಿಯಂನುತಹಬಗೆಗಾಗಿ । ತಂನಕಪಿಸೇನೆಗ
ಳಸಂನಾಹವಾಗಿ ॥ ೫ ॥ ಬಂದುರಾಮಸೇವೆಮಾಳ್ಪೆ
ನೆಂದುಬಾಷೆಕೊಟ್ಟಮೋಲೆಸಂದೇಹವಿಲ್ಲದೆತಂಮೊ
ಳೊಂದಾದರಂತೆ ॥ ೬ ॥ ದುಂದುಭಿಯಕಾಯವಕಾ
ಲಿಂದಚಿಂಮಿಯೋಜನಕ್ಕೆ । ಬಂದುಬೀಳಲಾಮೋ

ಳಕೇಳೊಂದುಶೌರ್ಯವ ‖ ೭ ‖ ಯೇಳುತಾಳವೃಕ್ಷ ವಂಸುಸೀಳುವಮಾಡಿಯಿರಾಗನಿಂಮು । ಮೇಲೆಕೂಡಿ ಬಪ್ಪರಂತೆಕಾಳಗಕೆಂದು ‖ ೮ ‖ ನಾಳೆನೋಡಿಕೊಂಬಾಯುದ್ಧವೇಳ್ವವಲ್ಲಯಂದಾತನ। ಕಾಲಮೇಲೆಬಿದ್ದುತಾರೆಹೇಳಿಕೊಂಡಳೊ ‖ ೯ ‖

ರಾಗ ಪಂತವರಾಳಿ ಅಟತಾಳ.

ಚಿತ್ರತಾರಾಂಗೀಕೇಳಾಬ್ಲೆಚಿತ್ರವಾಯ್ತುನಿಂಸಮಾತು । ಮಿತ್ರಜಾತಗಂಜುವಂಥವರ್ತಮಾನುಂಟೇನೆಕಾಂತೆ ‖ ೧‖ ಧಾತ್ರಿಯೊಳೆಂನಶೌರ್ಯಕೆತ್ರಿಮೂರ್ತಿಗಳಂಜುವರುಮತ್ತೆ । ರಾಮಗೀಮಾನೆಂಬತುಸ್ತಕರಿಂದೇನಾಹುದು ‖ ೨ ‖ ಚಿತ್ತದಲ್ಲಿಶಂಖೆಬೇಡಮತ್ತಕಾಸಿನೀನೆನೋಡಮತ್ತೆನೋಡೆಂನಕೈವಾಡಅತ್ತಹೋಗೆಂನನೆಗಾಡ ‖ ೩ ‖

ರಾಗ ಶಂಕರಾಭರಣ ಝಂಪೆತಾಳ.

ಮತ್ತುಮತ್ತೆಂನೊಡನೆನಿಂತುಕೊಂಡೀರಣದಿ। ವೃತ್ತರವಕೊಡುವೆಛಲುಧೂರ್ತ ಸುಗ್ರೀವ ‖ ೧ ‖ ಧೂರ್ತನಲ್ಲದಡನುಜಪತ್ನಿಯನು ಶರೆವಿಡಿದು । ರಕ್ತಮುದದಿಂದಕೊಡದಿಪ್ಪೆಯವಾಲಿ ‖ ೨ ‖ ತಂಮನೆಂಬುದರಿಂದಧರ್ಮಕ್ಕೆಬಿಟ್ಟರೆ । ಕರ್ಮಹಿಡಿದೀಪರಿಯಹೆಂಮೆಬಂತಲ್ಲ ‖ ೩ ‖ ಹೆಂಮೆಯಲ್ಲದಡನಿತುದುರ್ಮಾರ್ಗಗಳಲಿದುಷ್ಕರ್ಮಗತ್ತಿನಡಸುವದುಧರ್ಮವೇನ

ಯ್ಯ ॥ ೪ ॥ ಮೊದಲೈದುಭಾರಿನೋಡಿದೆನಿಂನದೆಲ್ಲ।
ಅದಮರತುಮರತುಬಂದಿದಿರಾದೆಕಳ್ಳ ॥ ೫ ॥ ಯಿಂದ
ನರಿಯೆಂಕೊಸಸರಿಯಕದಸವಿಮುಕಡೆಯ । ತುದಿಯ
ದಿನನಿನಗೆಬಂದೊದಗಿದರುಜಿಡಯ ॥ ೬ ॥ ಬಾಯಿಂದ
ಬಂದುದನುಬಗುಳಿನೀಸುಮ್ಮನೆ । ಸಾಯದಿರುಪೆಟ್ಟ
ನಲಿಸಟೆಯಲ್ಲತಮ್ಮ ॥ ೭ ॥ ನ್ಯಾಯವೇಸರಿಹೆಚ್ಚು
ಪಾತಿಸಾಡಿದವರು । ನಾಯಿಂದಕಡೆಯಾಗಿಬಗುಳು
ವದುಸಹಜ ॥ ೮ ॥ ಹೆಚ್ಚುಪಾತುಗಳ್ಯಾಕೆಹೆಟ್ಟರಿ
ತುಕೊಳ್ಳೆನುತ । ಕಿಟ್ಟಿನಂದದಶರವಯ್ಯನಾಮಾಃ ॥

ರಾಗ ಶಂಕರಾಭರಣ ಮಟ್ಟೆ ತಾಳ.

ಜಾಣನೆಹುದೆಭಳಿರೆನಿಂನತ್ರಾಣವೆಂನುಕಂಡೆತಂಮ
ಆನಲಾಪಡಿದಕೆಕೊಳ್ಳೊತ್ರಾಣದದ್ರಿಯ ॥ ಮಾಣದಿಟ್ಟ
ಗಿರಿಯತಟ್ಟಕಾಣುವಂತೆಮರಸಕೊನೆಯ । ಭಾನುಸು
ತನುಜಿಸುಟಸುರಪಸೂನುವಿದಿರಿಗೆ ॥ ೧ ॥ ಬರುವಗಿರಿ
ಯಕಂಡುವಾಲಿಕರದಿಬಡಿದುಮೊರವುತದರ । ತಿರಿಗಿ
ಬಿಸುಟಕೋಪದಿಂದತರಣಿತನುಜಗೆ ॥ ೨ ॥ ತಂಡತಂ
ಡದದ್ರಿಗಳನುಕೊಂಡುಕೊಂಡುಬಿಸುಡುತ್ತಿರಲು । ಚಂ
ಡಿನಾಟವಾಯಿತಮರರ್ಕಂಡುಬೆದರಲೂ ॥ ೩ ॥ ಹಿಂ
ಡುಹಿಂಡುಮರನಕಿತ್ತು । ಕೊಂಡುತಂದುಕೊಡುವ
ಮರ್ಕಟತ್ತು । ದಂಡೆಗೈಯೊಳಿಡಲುಸಮರದಂಡಿಗಿಕ್ಕಿ
ತು ॥ ೪ ॥ ಅಷ್ಟದೆಸೆಯೊಳಿರುವಬೆಟ್ಟವೃಕ್ಷವೆಲ್ಲತೀರ

ಲಾಗ । ಮುಷ್ಟಿಯುದ್ಧದಲ್ಲಿಹೆಣಗುಕಟ್ಟಸದದರು ॥ ಪೆಟ್ಟಪೆಟ್ಟಗೊಮ್ಮೆಕೂಗುತಟ್ಟಬಡಿದುಹಿಡಿದುತ್ರಿವಿದು ಜಟ್ಟಿಗಳಕಾಳಗಕ್ಕೆಚಿದರಿತಪ್ಪದೆಸೆಗಳು ॥ ೬ ॥ ಹೊಸಪರೀಯಬಿಂಡಿವಾಳ । ಮುಸುಲಮುದ್ಗರಂಗಳಿಂಬ । ಯಸೆಯಬಾಗತಗಲಿತವಗೆ । ನೊಸಲಬಳಿಯಲೀ ॥ ೭ ॥ ವ್ರಮೆಯರವಣಶಂತೆವಿ । ಕ್ರವಿಹಾಪಕೋಪದಿಂದಲಾಗ । ದ್ಯುಮಣಶರವನೆಸದನಾಗ । ಕಮಲಸಖಸುತಾ ॥ ೮ ॥ ಮಿತ್ರಕೋಪದಿಂದವಾಲಿಶಕ್ತಿಯುರಗಶರವನೆಸೆಯೆ । ಸತ್ವಮುರಿದುರವಿಜನಿ । ಸ್ವತ್ವತನದಲೀ ॥ ೯ ॥ ಕೃತ್ತಿವಾಸನಂತೆಕೋಪ । ವೆತ್ತುಗರುಡಶರವನೆಸದು । ಮಿತ್ರನಿಮಿಷದೊಳಗೆಶರವ ಕತ್ತರಿಸಿದನು ॥ ೧೦ ॥ ಇಂತುಹೆಣಗುತವರುಮನದ । ಪಂಥವಿಡಿದುಕಾದುತಿರಲು । ಅಂತರಂಗದಲ್ಲಿರವಿಜಚಿಂತಿಸೀದನು ॥೧೧॥ ಅಂತ್ಯಕಾಲಶರಣನಿಂಗೆ। ಬಂತುಯೆಂದುತಿಳಿದುರಾಮ । ನಿಂತುಕೊಂಡುಧನುವಮರೆಯೊಳ್ಸಂತವಿಸಿದನು ॥ ೧೨ ॥ ರಾಮಶರವಹೂಡಿಸು। ತ್ರಾಮಸುತನನಂಗಗೆಸೆಯೆ । ಭೂಮಿಗಡರಿಬಿದ್ದವಾಲಿತಾಮಸಾದಲೀ ॥ ೧೩ ॥ ಆಮಹಾ ರಾಮಶರವಾಮಹಸ್ತದಲ್ಲಿಪಿಡಿದು । ಭೂಮಿಪಾಲನೊಡನೆನುಡಿದ । ನೇಮದಿಂದಲೇ ॥ ೧೪ ॥ ಬೋಧೆಯಿಂದಸಮರದೊಳಗೆಸೋದರಂನಮೊಗವನೋಡಿ । ಕ್ರೋಧವಿಡಿದುಜರ

ವೃತವರ। ಮೊದಲಿಸಿದನೊ ॥ ೧೫ ॥ ಏದುರಾತ್ರಕಪಟ। ವಿದ್ಯಸಾಧಿಸಿದೆ ಭಳಿರೆಯಂತ್ರಿ। ದಾದರೇಸುಕೀರ್ತಿಬಂತು। ಮೇದಿನಿಯಲೀ ॥ ೧೬ ॥

ರಾಗ ಕೇತಾರ ಗೌಳ ಅಟತಾಳ

ಜಾಣನಹುದಹುದೊಸಂಗರಕತ್ರಿ। ತ್ರಾಣನಹುದಹುದೊ ॥ ಕ್ಷೋಣಿಯೊಳ್ನಿನಗೆಣೆಯಿಲ್ಲಸಂಗರಕತ್ರಿ। ಜಾಣನಹುದಹುದೆ ॥ ಪಲ್ಲ ॥ ಇನವಂಶದರಸುಗಳೊಳಗೆಹಿಂದೆ। ಜನಿಸಿದವರುನಿಂನಕೆಳಗೆ। ಘನಟೋರತನದಸಿಖಂಡಿವಿದ್ಯವನೆಷ್ಟ। ದಿನಸಾಧಿಸಿದೆಯೊನೀನುಲಂಡಿಗಳಸದ್ಗುಣವ। ಶೋಧಿಸಿದೆನಾನುನಿಂನಂತಕೊಜನರಿಲ್ಲಸಾಕ್ಷಿ। ಯೇನುರಾಘವಭಲು ॥ ೧ ॥ ಗಂಡನಿಲ್ಲದಹೆಂಗಳಂತೆನಾಚಿಕೊಂಡುನೀಮರೆಯಲ್ಲಿನಿಂತೆ। ಹೆಂಡತಿಗಾಗಿಕಂಡವರಮಾತಿನಮೇಲೆ। ಭಂಡಾಟಗಳಮಾಡಿದೆಹಸ್ತದಲಿಬಿ। ಲ್ಗೊಂಡುಬಾಣವಹೊಡಿದೆಜೋಡಾಗಿದ। ಗಂಡುಸನನುನೋಡಿದೆರಾಘವಭಲುಜಾಣನಹುದಹುದೊ ॥ ೨ ॥ ಲೇಸಾಯಿತ್ತೈಯನಿಂನಂಗಯಿಂನ್ನು। ಯೇಸುಹೇಳಿದರುಪ್ರಸಂಗವೋಸದೊಳೆಂನಸಂಹರಿಸಿದೆಯಿದರಿಂದ। ಯೇಸುಕೀರ್ತಿಗಳುಬಂತುಕಾಯದೊಳಿದ್ದ। ಪಾಶದಾಶಂಗಳುಸಂತುಮತ್ಸರವೆಂಬ। ವಾಸಿಪಂಥಗಳುಸಂತುರಾಘುವಭಲುಧೀರನಹುದಹುದಹುದೊ ॥ ೩ ॥

ಭಾಮಿನಿ ॥ ವಾಲಿಯಂಗದಶರವಿಡಿದುಭೂ । ಪಾಲಕನವಮೂದಲಿಸೆವಾನರ । ಜಾಲದೋಸರಿಕೆಯಲಿತಾರಾದೇವಿನಡೆತಂದೂ ॥ ಬಾಲನಂಗದಸಹಿತವಾಲಿಯ । ಮೇಲೆಬಿದ್ದಳುತ್ತಿರಲುನರಜನ । ಪಾಲಸಂತೈಸುತ್ತಕಡೆಗಿಂತೆಂದನವರೊಡನೇ ॥ ೧ ॥

ರಾಗ ಮಧ್ಯಮಾವತಿ ಆದಿತಾಳ.

ವಾನರರಧಿಪತಿಕೇಳೆಂನಮಾತ । ನೀನೆಂನಜರವೃದ್ಧ್ಯಾತಕೆಯಿಂದ್ರಜಾತ ॥ ಕ್ಷೋಣಿಭಾರವನಿಳುಹುವದೆಂಮೆಬಿರಿದು । ದಾನವರುಗಳದೃಷ್ಟರತಲೆಯರಿದು ॥ ನ್ಯಾಯವೆತಂಮನಸ । ತ್ರಿಯಶರವಿಡಿದುಹೇಸವಿದ್ದುದರಿಂದನೋಷಕಟ್ಟುವದು ॥ ೨ ॥ ಪ್ರಾಯಶ್ಚಿತ್ತಾಗಳಿದು। ಪರದೋಷಂಗಳಿಗೆ । ಕಾಯಖಂಡನೆಯಂಬನಿಜಮಾತಿನೊಳಗೆ ॥ ೩ ॥ ಮುಂದಿಂನುಬದುಕಾಬೇಕೆಂಬಾಸೆಯುಂಟೆ । ಹಿಂದೆತರವೆಬಾಣವದುನೋಯದಂತೆ ॥ ೪ ॥ ವೆಂದೇಬುದ್ಧಿಯೊಳೆಲ್ಲಸತ್ಯವೆಬಿಡದೆ । ಚೆಂದವಾಗಿರುವದುಸವರುಕಡೆಗೆ ॥ ೫ ॥

ವಚನ ॥ ಇಂತೆಂದು ಶ್ರೀರಾಮಚಂದ್ರದೇವರು ಅಪ್ಪಣೆಯಂಕೊಡಲಾಗಿ ಆಗವಾಲಿಯು ಈತ ಸಾಕ್ಷಾತನಾರಾಯಣನೆ ಅವತಾರವೆಂದು ತ್ರಿಳಿದು ಯಿಾತನ ಬಾಣದಿಂದ ಮರಣಯಿಟ್ಟರೆ ತನಗೆ ಸಾಲೋಕ್ಯ ಮುಕ್ತಿಯೆಲಭಿಸುವದೆಂದುನಿಶ್ಚಯಂಮಾಡಿ ಆಸನೊಡನೆ

ರೋನೆಂದುಬಿಂತ್ಯೈಸುತ್ತೀರ್ದನದಂತೆನೆ ॥೧॥

ರಾಗ ಭೈರವಿ. ತ್ರಿವುಡೆ ತಾಳ.

ಜಯಜಯ ರಾಮಹರೆ ಸೀತಾಪತೆ ಜಯಜಯ ರಾಮಹರೆ ॥ಪ॥ ವಿಕಸಿತಾಂಬುಜದಳಲೋಚನ ಪಾಪವಿನಾಶನ । ಸಕಲಾಭರಣವಿಭೂಷಣಹರೆ ॥೧॥ ಕಂಜಬಾಂಧವಕುಲಸೇಕರೆ । ಮಂಜುಳಾಕರಕುಂಜರವರದ ಮುನಿರಾಜಪೂಜಿತ ಜಯಜಯ ರಾಮಹರೆ ಸೀತಾಪತೆ ಜಯಜಯ ರಾಮಹರೇ ॥೨॥

ರಾಗ ಮಧುಮಾಧವಿ ಏಕತಾಳ.

ಕರುಣವಿದ್ದರೆ ಸಾಕು ನಿನ್ನ ಪಾದದ । ಕರುಣವಿದ್ದರೆ ಸಾಕು ॥ ಮೂರುದಿನದ ಸಂಸಾರ ಶಾಶ್ವತವಲ್ಲ । ಘೋರಪಾಪಗಳ ಸಂಹಾರ ಮಾಡುವದೊಂದು ಕರುಣವಿದ್ದರೆ ॥೧॥ ಭೂತಪಂಚಕದೇಹ ಯಾತಕೆ ಸ್ಥಿರ ಮೋಹ । ಚೇತನಾತ್ಮಕ ನಿನ್ನ ಪಾವನ ಪಾದಾಂಬುಜದ ॥೨॥ ತಂದೆತಾಯಿಗಳೆಂಬ । ಬಂಧುಸ್ನೇಹವಿಚಾರ ಯಾತಕೆಂದು ನಿನ್ನ ಪಾದಾರವಿಂದ ಪಾವನವೆಂಬ ಕರುಣ ॥೩॥

ರಾಗ ಪಂತುವರಾಳಿ ಏಕತಾಳ.

ರಾಮ ನಿನ್ನ ಬಾಣ ತಾಗಿದ ಮೇಲಿನ್ನುಂಟೆ । ಭೂಮಿಯೊಳಾಸೆಯ ನಗೇ ॥ ಕಾಮಿತ ಬೇರಿಲ್ಲ ಚಿತ್ತದಿ ಮುಂ

ತ್ರಿಯುನಿತ್ತುಪ್ರೇಮದಿಂಪಾಲಿಸೆಂನೆನು ॥೧॥ ಇತ್ತಬಾ
ರೆಂತಂಮ ಸುಗ್ರೀವ ಕಿಷ್ಕಿಂದಪಾಲಿರು । ಪತ್ಯವಪಾ
ಲಿಸೈಯ ॥೨॥ ಸತ್ಯವಂತೆ ಈತಾರೆಯಮಾನವ ಕಾ
ಯ್ದು ಸ್ವಸ್ತಿರದಿರಕ್ಷಿಸೈಯ ॥೩॥ ಬಾಲಬುದ್ಧಿಯನರಿ
ಯುಬಿಟ್ಟಂಗದನ । ಮೇಲೆಕಟಾಕ್ಷವಿರಲೀ ॥ ಮೇಲಾ
ದಕಪಿನಾಯಕರು ಯಂನನುನಂಬಿಬಹು । ಗಾಲಯಿಂ
ದ್ದಂಥವರು ॥೪॥ ಕಷ್ಟವಮಾಡಿಕೊಳ್ಳದೆ ಸಜ್ಜನರೊಳು
ದುಷ್ಟರೆಂದೆನಿಸಿಕೊಳ್ಳದೆ ॥೬॥ ಅಷ್ಟಸೌಭಾಗ್ಯದಿಂದಲೆ
ಯುಂದುಸಾಂಬ್ರಾಜ್ಯ । ಪಟ್ಟವನಾಳಿರು ಸುಖದೀ ॥೭॥
ಭರತಶತೃಘ್ನರಂದದಿರಕ್ಷಿಸುರಾಮ । ತರಳಂಗದ
ಸುಗ್ರೀವನ ॥೮॥ ನಿರತಕಟಾಕ್ಷವಿರಲಿ ವಂಶದವರಲ್ಲಿ
ಕರುಣಿಸು ಮುಕ್ತಿದೇಹೀ ॥೯॥

ಮಾಧ್ವಿಕ.

ಬಾಣವನುಸೆಳದುತೆಗದಾಕ್ಷಣವೆ ನೋಡಿದರೆ।
ಪ್ರಾಣಪಾರಿತುಯಿಂಪ್ರಸುತಗೆತಾರಾದೇವಿ । ಕಾಣು
ತಂಗದಸಹಿತಸುಗ್ರೀವಮೊದಲಾಗಿ । ನಾನಾಗುಣಂ
ಗಳಂಕೊಂಡಾಡುತಾ ॥ ಕೇಣವಿಲ್ಲದೆ ಕ್ಲೇಶದಿಂದಳುವ
ವೇಳ್ಯದಲಿ । ಕ್ಷೋಣಿಪತಿರಘುನಾಥ ಸಂತೈಸಿಬಳಿಕ
ವರ । ಯೇಣನೇತ್ರೆಯಮೊಗವನೋಡಿಕಂಬನಿದೊ
ಡದುತಾನೆಂದನತಿಧೈರ್ಯವಾ ॥೧॥

ರಾಗ ಕಲ್ಯಾಣಿ ಅಷ್ಟತಾಳ.

ಅಳುವದ್ಯಾತಕೆನೀತಾರೆನಿನ್ನಯಮನದೊಳು
ಧೈರ್ಯವಾಗುನೀರೆ । ನೆಲೆಯಿಲ್ಲಸಂಸಾರವೆಂಬುದು
ಮೊದಲೆನೀತಿಳಿದಿರ್ದ ಕಾರ್ಯಕಾಣೆಕೇಳೆಲೆಜಾಣೆ ॥೧॥
ಬಾಲನಿಮರುಗದಿರುಲಕ್ಷ್ಮಣನಂತೆ । ಪಾಲಿಸಿಕೊಂಬೆ
ಸೇರು । ವಾಲಿನಂದನಬೇಡುಕೊಡುವೆನಂಬುಗೆ
ಯಂನು । ಜಾಲಲವೂತಲ್ಲಯುನನಂಬಿರುವುಂ
ನಾ ॥೨॥ ತರಣಿನಂದನಸುಗ್ರೀವತಾರಾದೇವಿಸು
ಕುನೀನತಿಧೈರ್ಯವ । ಧರೆಯಸಜ್ಜನರುಯಿಾದೇವಿ
ಯನಾಮವಸ್ಮರಿಸಿಕೊಂ । ಡಿರಲುಮೋಕ್ಷಯಂಬ
ಕಟಾಕ್ಷ ... ... ॥೩॥

ವಾರ್ಧಿಕ. ಅರಸುಮಕ್ಕಳಿಕೇಳಿನಿಂಮಪಿತ
ಯಿಾರೀತಿ । ವರಪತಿವ್ರತೆಸುತನಸಂತೈಸಿತಮ್ಮ
ವಾ । ನರಶಾಸ್ತ್ರವಿಧಿಯಿಂದವಾಲಿಗಾಗುವಪೈತ್ರಕ
ರ್ಮಂಗಳಂವಿರಚಿಸೀ ॥ ಸುರರುಮುನಿಗಳುಸಿದ್ಧಸಾ
ಧ್ಯಕಿನ್ನರರುಕಿಂ । ಪುರುಷರಾಘವಸಹಿತಕಿಷ್ಕಿಂ
ಧನಗರದಾಧೊರೆತನಕೆಸುಗ್ರೀವನಂಮಾಡಿದರುಶಾ
ಸ್ತ್ರದಿಂವಿಹಿತಕ್ರಮಗಳಿಂದಾ ॥೧॥

ರಾಗ ಪಂತುವರಾಳಿ ತ್ರಿವುಡೆತಾಳ.

ನಾಕವನಾಳುವದೇವತೆಗಳು । ಶ್ರೀಕರದಿನೆರದು

ಸುಗ್ರೀವನ। ಲೋಕಂಗಳಿಗೆಲ್ಲ ಧೊರೆಯಾಗು। ಧೊರೆಯಾಗೆಂದೆನುತಲೆ ಹರಸುತ ಬೇಕಾದಕ್ಷತೆಯ ಬೆಳಗೀರೆ ॥೧॥ ಅಂಬರದಲಿ ಚರಿಸುವ ನಾರದ ತುಂಬುರರೈ। ತಂದು ಸುಗ್ರೀವನ ಜಾಂಬವನೊಲಿಗರಿಗರಸಾಗು। ಗರಸಾಗೆಂದರಸುತ ಸತ್ತಿಯು ರುಮುಂಗಳಾರತಿಯಾಬೆಳಗೀರೆ ॥೨॥ ಗುಪಿತದೊಳ ನುಗ್ರಾಲವ್ರುವನ ದಶಿತಪಸಿಗಳೈತಂದು ಸುಗ್ರೀವನಯಿಾ। ಕಪಿಗಳಿಗೆಲ್ಲ ಅರಸಾಗು। ಅರಸಾಗೆಂದೆನುತಲ ಹರಸುತ ಸಂಭ್ರದಕ್ಷತೆಯ ತಳಿದಾರು ॥೩॥

ಶಾರ್ದೂ ಕ॥ ತರಳರಿಲ್ಕೇಳಿ ಸುಗ್ರೀವನಿಪ್ಪತ್ರೈದು। ವರದಿನಗಳಿಗಿದುರ್ಕಿಷ್ಕಿಂಧೆಯೊಳುಮುಂದಣಿಪಾ। ನರಸೈನ್ಯಮಂಕಳುಹಿನಾಲ್ಕುತಿಂಗಳ ಮೇಲೆ। ಬರ್ಪುವತಾಹಗಳ ಮಾಡೀ ॥ ತರಣಿನಂದನನ ಬೀಳ್ಕೊಂಡು ಲಕ್ಷ್ಮಣನೊಡನೆ। ಮರಳಿಬಂದಿರ್ದನೆಂಬಲ್ಲಿಗಾಯಿತು ಸಂಧಿ। ವರಕಾವ್ಯಪ್ರದದೊಡೆಯ ಕೃಷ್ಣರಾಯನ ಕರುಣದಿಂದ ಸಂಪೂರ್ಣವಾಗೀ ॥೧॥

ಅಂತು ಸಂಧಿ ೧ ಕ್ಕಂ ಮಂಗಳಮಸ್ತು.

ಯಕ್ಷಗಾನ ವಾಲಿ ಸುಗ್ರೀವರ ಕಾಳಗ

ಸಂಪೂರ್ಣಂ.

3.65

ಶ್ರೀ

Jaksagāna

ಯಕ್ಷಗಾನ

ಪಂಚವಟೀ ರಾಮಾಯಣದೊಳಗಣ

ವಾಲಿ ಸುಗ್ರೀವರ ಕಾಳಗ.

Edited by

H. NARASIMMIAH,

First Edition 2,000 Copies.

BANGALORE:

Printed and Published

BY H. NARASIMMIAH,

at the Vichara Durpana Press.

1870.

(Price 3 Annas.) (ಕ್ರಯ ೩ ಆಣೆ.)